ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:07-10-2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ**

1. ಲಕ್ಷ್ಮೀಕಾಂತ ರೆಡ್ಡಿ – ಅಧ್ಯಕ್ಷರು
2. ಅಶ್ವಥನಾರಾಯಣಗೌಡ – ಸದಸ್ಯರು
3. ಕೆ.ಮಹೇಶ್ ಬಾಬು – ಸದಸ್ಯರು
4. ಎಂ.ಜಿ.ಜಯರತ್ನ – ಸದಸ್ಯರು
5. ಲಲಿತ ಹೆಚ್.ಎಸ್. – ಸದಸ್ಯರು
6. ಆನಂದ್ ವಿ – ಸದಸ್ಯರು
7. ಲಾವಣ್ಯ ಗಣೇಶ್ ರೆಡ್ಡಿ – ಸದಸ್ಯರು
8. ವರಲಕ್ಷ್ಮಿ ಜೆ – ಸದಸ್ಯರು
9. ಎನ್.ಜಯಪಾಲ – ಸದಸ್ಯರು
10. ಎಂ.ಕೆ. ಗುಣಶೇಖರ್ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು ಶ್ರೀಯುತರಾದ**

ಕೌನ್ಸಿಲ್ ಕಾರ್ಯದರ್ಶಿ
ಉಪ ಆಯುಕ್ತರು (ಆಡಳಿತ)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ಸಹಾಯಕ ಆಯುಕ್ತರು (ಆಡಳಿತ)
ವಿದ್ಯಾಧಿಕಾರಿ(ಪ್ರಭಾರ)
ವಿಶೇಷ ಅಧಿಕಾರಿ

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 01/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀಮತಿ ಸಿ. ಕಾಮೇಶ್ವರಿ ದೇವಿ, ಪ್ಲಾಟ್ ನಂ 1, ಪ್ರಿಯದರ್ಶಿನಿ ಲಾ ಕಾಲೇಜ್ ಹತ್ತಿರ, ಸಂತೋಷನಗರ, ಅಟ್ಟೂರು, ಯಲಹಂಕ, ಬೆಂಗಳೂರು, ಇವರನ್ನು ಕಛೇರಿ ಆದೇಶದಲ್ಲಿ ಬಿ.ಹೆಚ್.ಯು.ಪಿ ಯೋಜನೆಯಲ್ಲಿ ಲೋಕಲ್ ಕೋ ಆರ್ಡಿನೇಟ್ ಆಗಿ ಕಾರ್ಯನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.10000-00ಗಳ ಸಂಚಿತ ವೇತನದ ಮೇಲೆ ನೇಮಿಸಲಾಗಿರುತ್ತದೆ.

ಸದರಿ ಗುತ್ತಿಗೆ ಅವಧಿಯು ದಿನಾಂಕ:10-08-2011ಕ್ಕೆ ಮುಕ್ತಾಯವಾಗಿರುವುದರಿಂದ ರ ಕಛೇರಿ ಆದೇಶದಲ್ಲಿ ದಿನಾಂಕ:11-08-2011ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ವಿಸ್ತರಿಸಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:10-08-2012ಕ್ಕೆ ಮುಕ್ತಾಯಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಬಿ.ಹೆಚ್.ಯು.ಪಿ.ಯ ಯೋಜನೆಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ವಿವಿಧ ಸಂಘ ಸಂಸ್ಥೆಗಳು / ಪಾಲಿಕೆ ಆಸಪತ್ರೆಗಳೊಂದಿಗೆ ಸಮನ್ವಯ ಸಾಧಿಸಲು ಶ್ರೀಮತಿ ಸಿ. ಕಾಮೇಶ್ವರಿ ದೇವಿ, ಇವರ ಸೇವೆಯು ಅವಶ್ಯಕತೆ ಇರುವುದಿಂದ ಸದರಿಯವರ ಸೇವೆಯನ್ನು ದಿನಾಂಕ:11-08-2012 ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

1.10.13

126

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆದ್ದರಿಂದ ಶ್ರೀಮತಿ ಕಾಮೇಶ್ವರಿ ದೇವಿ, ಬಿ.ಹೆಚ್.ಯು.ಪಿ. ಯೋಜನೆಯಲ್ಲಿ ಲೋಕಲ್ ಕೋ ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ದಿನಾಂಕ:11-08-2012 ರಿಂದ ಅನ್ವಯವಾಗುವಂತೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:24.06.2013ರ ಸಂಖ್ಯೆ:ಬಿ12(4)ಪಿಆರ್/179/10-11/13-14ರ ಟಿಪ್ಪಣಿ.

**ನಿರ್ಣಯ: ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸ್ಪಷ್ಟೀಕರಣ/ವಿವರಣೆಗಳೊಂದಿಗೆ ಮರು ಮಂಡಿಸುವುದು**

1. ದಿನಾಂಕ: 11-08-2012 ರಿಂದ ಒಂದು ವರ್ಷ ಮುಂದುವರೆಸಲು ದಿನಾಂಕ: 24-06-2013 ರಲ್ಲಿ ಅಂದರೆ ಒಂದು ತಿಂಗಳ ಸೇವೆ ಬಾಕಿ ಇರುವಾಗ ಟಿಪ್ಪಣಿ ಮಂಡಿಸಲು ಕಾರಣವೇನು?
2. ಸಮಿತಿಯ ಅನುಮೋದನೆ ಇಲ್ಲದೆ ದಿನಾಂಕ: 11-08-2012 ರಿಂದ ಸದರಿಯವರನ್ನು ಗುತ್ತಿಗೆ ಆಧಾರದ ಮೇಲೆ ಯಾವ ನಿಯಮದಡಿಯಲ್ಲಿ ಮುಂದುವರೆಸಲಾಯಿತು?
3. ಸದರಿಯವರನ್ನು ಪ್ರಥಮವಾಗಿ ನೇಮಕಮಾಡಿಕೊಳ್ಳವಾಗ ಸರ್ಕಾರದ/ಸಮಿತಿಯ ಅನುಮೋದನೆ ಪಡೆಯಲಾಗಿದೆಯೆ?
4. ಸದರಿಯವರು ಆಗಸ್ಟ್ 2009 ರಿಂದ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವರ ಕಾರ್ಯಸಾಧನೆಗಳೇನು ಪಾಲಿಕೆಗೆ ಇವರ ಸೇವೆಯಿಂದ ಆಗಿರುವ ಅನುಕೂಲತೆಗಳೇನು?
5. ಇವರು ನಿರ್ವಹಿಸುತ್ತಿರುವ ಕಾರ್ಯವನ್ನು ಪಾಲಿಕೆಯ ಸಿಬ್ಬಂದಿಗಳು ನಿರ್ವಹಿಸಲು ಸಾಧ್ಯವಿಲ್ಲವೆ?
6. ಇವರ ಗುತ್ತಿಗೆ ಅವಧಿಯು 10-08-2012 ಕ್ಕೆ ಮುಕ್ತಾಯಗೊಂಡಿದ್ದು ಅನಂತರದ ಅವಧಿಯಲ್ಲಿ ಮುಂದುವರಿಕೆ ಆದೇಶವಿಲ್ಲದೇ ಇವರಿಗೆ ಯಾವ ನಿಯಮದಡಿಯಲ್ಲಿ ವೇತನ ಪಾವತಿಸಲಾಗಿದೆ? ಈ ಪ್ರಕರಣದಲ್ಲಿ ಆಯುಕ್ತರ ಅನುಮತಿ ಪಡೆಯಲಾಗಿದೆಯೆ?

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 02/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ವೇತನ ಶ್ರೇಣಿ ರೂ.12500-24000/-(ಹಳೆ ವೇತನ ಶ್ರೇಣಿ ರೂ.6250-12000/-)ರ 171 ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳಿದ್ದು, ಈ ಹುದ್ದೆಗಳನ್ನು ಕಂದಾಯ ವಸೂಲಿಗಾರರು ಮತ್ತು ದ್ವಿತೀಯ ದರ್ಜೆ ಸಹಾಯಕರ ವೃಂದಗಳಿಂದ 2:1ರ ಅನುಪಾತದಲ್ಲಿ ಸೇವಾ ಹಿರಿತನ ಹೊಂದಿರುವ ಹಾಗೂ ಅಕೌಂಟ್ಸ್ ಲೋಯರ್, ರೆವಿನ್ಯೂ ಲೋಯರ್ ಮತ್ತು ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದಂತಹ ನೌಕರರುಗಳಿಗೆ ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗೆ ಮುಂಬಡ್ತಿ ಮತ್ತು ಖಾಯಂ ವರ್ಗಾವಣೆ ಮೂಲಕ ತುಂಬಲಾಗುತ್ತಿದೆ.

ಕರ್ನಾಟಕದಲ್ಲಿರುವ ಇತರೇ ಮಹಾನಗರ ಪಾಲಿಕೆಗಳಲ್ಲಿ ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳು ಇಲ್ಲದೇ ಇರುವುದನ್ನು ಗಮನಿಸಿ, 171 ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳನ್ನು

16/10/13

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವೇತನ ಶ್ರೇಣಿ ರೂ.14550-26700/-(ಹಳೆ ವೇತನ ಶ್ರೇಣಿ ರೂ.7275-13350/-)ರ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಕೋರಿ ಸರ್ಕಾರಕ್ಕೆ ಪತ್ರ ಬರೆದು ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಈ ಸಂಬಂಧ ಸರ್ಕಾರವು ಪತ್ರಗಳಲ್ಲಿ 171 ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳನ್ನು ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೋರಲಾಗಿದ್ದ ಹಲವಾರು ಅಂಶಗಳಿಗೆ ಪಾಲಿಕೆಯಿಂದ ಸರ್ಕಾರಕ್ಕೆ ಉತ್ತರಗಳನ್ನು ಒದಗಿಸಲಾಗಿರುತ್ತದೆ.

ಈ ಮೇರೆಗೆ, ಸರ್ಕಾರದ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 171 ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳನ್ನು ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸುವ ಬಗ್ಗೆ ಮೊದಲಿಗೆ ಪಾಲಿಕೆಯ ಸಭೆಯಲ್ಲಿ ತೀರ್ಮಾನಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಪರಿಶೀಲಿಸಲಾಗಿ, ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಯ ಮತ್ತು ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆ ವೇತನ ಶ್ರೇಣಿಗಳು ಹಾಗೂ ಒಟ್ಟು ವೇತನ ಈ ಕೆಳಕಂಡಂತೆ ಇರುತ್ತದೆ.

| **ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಯ ಹೊಸ ಪರಿಷ್ಕೃತ ವೇತನ ಶ್ರೇಣಿ ರೂ.14550-26700/-** | | **ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಯ ಹೊಸ ಪರಿಷ್ಕೃತ ವೇತನ ಶ್ರೇಣಿ ರೂ.14550-26700/-** | |
|---|---|---|---|
| 1. ಕನಿಷ್ಠ ವೇತನ | – 14550 | 1. ಕನಿಷ್ಠ ವೇತನ | –12500 |
| 2. ತುಟ್ಟಿ ಭತ್ಯೆ | – 00 | 2. ತುಟ್ಟಿ ಭತ್ಯೆ | – 00 |
| 3. ಮನೆ ಬಾಡಿಗೆ ಭತ್ಯೆ20% | – 3638 | 3. ಮನೆ ಬಾಡಿಗೆ ಭತ್ಯೆ20% | – 3125 |
| 4. ನಗರ ಪರಿಹಾರ ಭತ್ಯೆ | – 350 | 4. ನಗರ ಪರಿಹಾರ ಭತ್ಯೆ | – 350 |
| 5. ವೈದ್ಯಕೀಯ ಭತ್ಯೆ | – 100 | 5. ವೈದ್ಯಕೀಯ ಭತ್ಯೆ | – 100 |
| ಒಟ್ಟು | **– 18,638/–** | ಒಟ್ಟು | **– 16,075/–** |
| **171 ಪ್ರ.ದ.ಕಂ.ಪ ಹುದ್ದೆಗೆ ವಾರ್ಷಿಕ ಒಟ್ಟು ವೇತನ ರೂ.31,87,098/-ಆಗುತ್ತದೆ.** | | **171 ದ್ವಿ.ದ.ಕಂ.ಪ ಹುದ್ದೆಗೆ ವಾರ್ಷಿಕ ಒಟ್ಟು ವೇತನ ರೂ.27,48,825/-ಆಗುತ್ತದೆ.** | |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 171 ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳನ್ನು ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂಬಂಧ ಪಾಲಿಕೆಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:04.09.2013ರ ಸಂಖ್ಯೆ:ಬಿ12(1)ಪಿಆರ್/97/2009-10ರ ಟಿಪ್ಪಣಿ.

Acdl 1/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಿರ್ಣಯ: ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸ್ಪಷ್ಟೀಕರಣ/ವಿವರಣೆಗಳೊಂದಿಗೆ ಮರು ಮಂಡಿಸುವುದು

1. ಆಯುಕ್ತರು ಮಂಡಿಸಿರುವ ಟಿಪ್ಪಣಿಯಲ್ಲಿ ವೇತನ ಶ್ರೇಣಿಯನ್ನು ತಪ್ಪಾಗಿ ನಮೂದಿಸಲಾಗಿರುತ್ತದೆ
2. ಪ್ರಸ್ತಾವನೆಯ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ/ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಮತ್ತು ಉಪ ಆಯುಕ್ತರು ಕಂದಾಯ ರವರ ಅಭಿಪ್ರಾಯ ಪಡೆದಿರುವ ಬಗ್ಗೆ ಮಾಹಿತಿ ಇರುವುದಿಲ್ಲ.
3. ಹಾಲಿ ಎಷ್ಟು ಜನ ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 03/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ವಿರೋಧ ಪಕ್ಷದ ನಾಯಕರು, ಬಿ.ಬಿ.ಎಂ.ಪಿ. ರವರ ಪತ್ರದ ಸಂಖ್ಯೆ: ಬಿ.ಬಿ.ಎಂ.ಪಿ./ವಿಪನಾ/349/2012-13, ದಿನಾಂಕ:17-06-2012ರಲ್ಲಿ ಸದರಿ ವಿಷಯವಾಗಿ ಪಾಲಿಕೆಯ ಕಲ್ಯಾಣ ವಿಭಾಗದ ವತಿಯಿಂದ 1994ರಲ್ಲಿ ಕ್ವೀನ್ ರಸ್ತೆ (ಹಳೇ ವಾರ್ಡ್ 78) ಹಾಗೂ ಜಯನಗರ 2ನೇ ಬಡಾವಣೆ (ಹಳೇ ವಾರ್ಡ್ 50)ಯಲ್ಲಿ ಗಣಕಯಂತ್ರ ತರಬೇತಿ ಕೇಂದ್ರ ತೆರೆದು, ಕಾರ್ಯ ನಿರ್ವಹಣೆ ಅನುಕೂಲಕ್ಕಾಗಿ ಗಣಕಯಂತ್ರ ಭೋದಕ/ಭೋದಕೇತರ ಸಿಬ್ಬಂದಿ ವರ್ಗದ ನೌಕರರನ್ನು ನೇಮಕ ಮಾಡಿಕೊಳ್ಳುವ ಕುರಿತು ದಿನಾಂಕ:27-04-1994ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ/ತೀರ್ಮಾನದಂತೆ ನೌಕರರ ಸೇವೆ ಪಡೆದಿರುವ ಬಗ್ಗೆ ಹಾಗೂ ಆ ಗಣಕಯಂತ್ರ ತರಬೇತಿ ಕೇಂದ್ರ ಮುಚ್ಚಿದ ಸಂದರ್ಭದಲ್ಲಿ 2006ರಲ್ಲಿ ಇವರ ಸೇವೆಯನ್ನು ವಿದ್ಯಾ ಇಲಾಖೆಗೆ ವರ್ಗಾಯಿಸಿ, ಆ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಪಾಲಿಕೆಯಿಂದ ವೇತನ ಪಡೆಯುತ್ತಿರುವ ಬಗ್ಗೆ ತಿಳಿದು ಬರುತ್ತದೆ ಹಾಗೂ ಪ್ರಸ್ತುತ ವಿದ್ಯಾ ಇಲಾಖೆಯಲ್ಲಿ ಇವರುಗಳು ಸೇವೆ ಸಲ್ಲಿಸುತ್ತಿದ್ದು, ಇವರ ಸೇವೆ ವಿದ್ಯಾ ಇಲಾಖೆಗೆ ಅತ್ಯಗತ್ಯವಿರುವ ಬಗ್ಗೆ ವಿದ್ಯಾಧಿಕಾರಿಗಳು ಪಾಲಿಕೆ ಆಡಳಿತದ ಗಮನಕ್ಕೂ ವರದಿ ಮಂಡಿಸಿರುವ ಬಗ್ಗೆ ತಿಳಿದು ಬರುತ್ತದೆ. ಆದರೆ ಆ ನೌಕರರುಗಳಿಗೆ ವೇತನ ನೀಡುವ ವಿಷಯದಲ್ಲಿ ಹೊರಗುತ್ತಿಗೆ ಆಧಾರದ ನಿಯೋಜಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿ 2012ರ ಡಿಸೆಂಬರ್‌ನಿಂದ ವೇತನ ತಡೆಹಿಡಿದಿರುವುದರಿಂದ ಆರ್ಥಿಕ ಸಮಸ್ಯೆ ಎದುರಾಗಿದ್ದು, ಕುಟುಂಬದ ಜೀವನ ನಿರ್ವಹಣೆ ಸಮಸ್ಯೆ ಉಂಟಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ.

ಈ ಬಗ್ಗೆ ಮೇಲ್ಕಂಡ ವಿವರಗಳನ್ನು ತಮ್ಮ ಗಮನಕ್ಕೆ ತರುತ್ತಾ, ಈ ವಿಷಯದಲ್ಲಿ ತಾವೂ ಪರಿಶೀಲಿಸಲು ಕೋರುತ್ತಾ, ದಿನಾಂಕ:27-04-1994ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ/ತೀರ್ಮಾನದಂತೆ 1994ರಿಂದಲೂ ಪಾಲಿಕೆಯು ಪ್ರಸ್ತಾಪಿತ ನೌಕರರ ಸೇವೆಯನ್ನು ಪಡೆಯುತ್ತಿದ್ದು, ಅವರುಗಳಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ/ಪಂಗಡ ವರ್ಗಕ್ಕೆ ಸೇರಿದವರಾಗಿದ್ದು, ಈ ಉದ್ಯೋಗ ಅವಲಂಭಿಸಿ ಕುಟುಂಬದ ನಿರ್ವಹಣೆ, ಜವಾಬ್ದಾರಿ/ಮಕ್ಕಳ ವಿದ್ಯಾಭ್ಯಾಸ ಕಾರಣಗಳಿಂದ ಆರ್ಥಿಕ ತೊಂದರೆ ಉಂಟಾಗುತ್ತಿರುವುದರಿಂದ, ಮಾನವೀಯತೆ ದೃಷ್ಟಿಯಿಂದ, ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಿಕೊಳ್ಳುವ ಪ್ರಸ್ತಾವನೆಯನ್ನು ತಡೆಹಿಡಿದು, ಈ ಹಿಂದಿನ ವೇತನ

1/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

...ತಿಯ ರೀತಿ, ಪ್ರಸ್ತುತ ವೇತನ ಪಾವತಿ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಹಾಗೂ ಈ ವಿಷಯದಲ್ಲಿ ಆ ...ರುಗಳ ಬೇಡಿಕೆ/ಕೋರಿಕೆಯನ್ನು ಬಗೆಹರಿಸುವ ಬಗ್ಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ/ತೆರಿಗೆ ಮತ್ತು ...ಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಪ್ರಸ್ತಾವನೆ ಮಂಡಿಸಿ, ಸಮಿತಿಯ ತೀರ್ಮಾನದಂತೆ ...ದಿನ ಕ್ರಮ ವಹಿಸಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಕೆಳಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರಲಾಗಿದೆ.

- ವಾರ್ಡ್ ಸಂಖ್ಯೆ 78, ಕ್ವೀನ್ಸ್ ರಸ್ತೆ, ಗಣಕಯಂತ್ರ ಗೌರವ ಸಿಬ್ಬಂದಿಯ ನೇಮಕಾತಿ ಕಡತವು 1994ರಲ್ಲಿ ಪ್ರಾರಂಭವಾಗಿದ್ದು, ಮೂಲ ಕಡತವು ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ಹಾಗೂ ವಾರ್ಡ್ ಸಂಖ್ಯೆ 50, ವಿಶ್ವೇಶ್ವರಪುರ, ಜಯನಗರ 2ನೇ ಬ್ಲಾಕ್, ಗಣಕಯಂತ್ರ ತರಬೇತಿ ಕೇಂದ್ರವು 1999ರಲ್ಲಿ ಪ್ರಾರಂಭಿಸಿದ್ದು, ಸದರಿ ಕಡತವು ಜೆ.ಸಿ. ರಸ್ತೆಯಲ್ಲಿರುವ ರೆಕಾರ್ಡ್ ರೂಂನಲ್ಲಿರುವ ಸಂಭವವಿರುವುದಾಗಿ ಕಲ್ಯಾಣಾಧಿಕಾರಿಗಳು ತಿಳಿಸಿರುತ್ತಾರೆ.
- ಉಪ ಆಯುಕ್ತರು (ಕಲ್ಯಾಣ) ರವರ ಕಛೇರಿ ಆದೇಶ ಸಂಖ್ಯೆ:ಕಅಸಿ3/ಪಿ.ಆರ್:45/04–05, ದಿನಾಂಕ:06–10–2006ರಂದು ಕಲ್ಯಾಣ ಇಲಾಖೆಯಿಂದ ಈ ಕೆಳಕಂಡಂತೆ ದಿನಾಂಕ:31–03–2007 ರವರೆಗೆ ವಿದ್ಯಾ ಇಲಾಖೆಗೆ ನಿಯೋಜಿಸಿರುತ್ತಾರೆ.

| ಕ್ರ. ಸಂ. | ಗೌರವ ಸಿಬ್ಬಂದಿಯ ಹೆಸರು | ಹುದ್ದೆ | ಮಾಹೆಯಾನ ವೇತನ |
|---|---|---|---|
| 1. | ಶ್ರೀ ರಂಗನಾಥ್ | ಪ್ರಾಂಶುಪಾಲರು | 7500.00 |
| 2. | ಶ್ರೀ ಎಸ್. ಅಶೋಕ್ | ಪ್ರಾಂಶುಪಾಲರು | 7500.00 |
| 3. | ಶ್ರೀ ಎಸ್. ಭಾಸ್ಕರನ್ | ಉಪನ್ಯಾಸಕರು | 6000.00 |
| 4. | ಶ್ರೀಮತಿ ಅರುಣಾ ರಮೇಶ್ | ಉಪನ್ಯಾಸಕರು | 6000.00 |
| 5. | ಶ್ರೀಮತಿ ಜೆ. ಪದ್ಮಿನಿ | ಉಪನ್ಯಾಸಕರು | 6000.00 |
| 6. | ಶ್ರೀ ಎಂ.ಕೆ. ಶಿವರಾಮ್ | ಮೇಲ್ವಿಚಾರಕರು | 3750.00 |
| 7. | ಶ್ರೀ ಎನ್. ಮಹೇಶ್ | ಮೇಲ್ವಿಚಾರಕರು | 3750.00 |
| 8. | ಶ್ರೀ ಸುಬ್ರಮಣಿ | ನಾ.ದ.ನೌಕರರು | 3000.00 |
| 9. | ಶ್ರೀ ಪಿ. ಅಸ್ಸು | ನಾ.ದ.ನೌಕರರು | 3000.00 |
| 10. | ಶ್ರೀ ಬಾಬುನಾಯಕ್ | ನಾ.ದ.ನೌಕರರು | 3000.00 |

- ಕ್ರ.ಸಂ. (4)ರಲ್ಲಿರುವ ಶ್ರೀಮತಿ ಅರುಣಾ ರಮೇಶ್, ಉಪನ್ಯಾಸಕರು ದಿನಾಂಕ:01-11-2006 ರಿಂದ ಕೆಲಸಕ್ಕೆ ಗೈರು ಹಾಜರಾಗಿರುತ್ತಾರೆ.

- ಕ್ರ.ಸಂ. (6)ರಲ್ಲಿರುವ ಶ್ರೀ ಎಂ.ಕೆ. ಶಿವರಾಮ್, ಮೇಲ್ವಿಚಾರಕರು ಜೂನ್ 2007 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ.

- ಶ್ರೀ ರಂಗನಾಥ್, ಪ್ರಾಂಶುಪಾಲರು ಹಾಗೂ ಶ್ರೀ ಅಶೋಕ್, ಪ್ರಾಂಶುಪಾಲರು ರವರು ಮಾರ್ಚ್ 2009ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ.

- ಕಲ್ಯಾಣ ಇಲಾಖೆಯಿಂದ ನಿಯೋಜನೆಗೊಂಡ ನೌಕರರುಗಳಿಗೆ ಏಪ್ರಿಲ್ 2007ರಿಂದ ಜನವರಿ 2012ರವರೆಗಿನ ವೇತನವನ್ನು ವಿದ್ಯಾ ಇಲಾಖೆಯ ಆಯವ್ಯಯ ಲೆಕ್ಕಶೀರ್ಷಿಕೆ 25 ಶಿಕ್ಷಣ, ಸಾಮಾನ್ಯ ವೆಚ್ಚಗಳು, ಗೌರವ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಲೆಕ್ಕಶೀರ್ಷಿಕೆಯಲ್ಲಿ ನೇರವಾಗಿ ನೌಕರರುಗಳ ಹೆಸರಿಗೆ ವೇತನವನ್ನು ಪಾವತಿಸಲಾಗಿರುತ್ತದೆ.

- ಮುಖ್ಯ ಲೆಕ್ಕಾಧಿಕಾರಿರವರು ಶ್ರೀ ಸುಬ್ರಮಣಿ, ನಾ.ದ.ನೌ. ಹಾಗೂ ಶ್ರೀ ಪಿ.ಅನ್ನು, ನಾ.ದ.ನೌ. ಕ್ರಮವಾಗಿ ನಿರ್ದೇಶಕರು, ಶ್ರಮಿಕ ವಿದ್ಯಾಪೀಠ ರವರ ಜ್ಞಾಪನ ಪತ್ರ ಸಂಖ್ಯೆ: ಎಸ್.ವಿ.ಪಿ/ಬಿ.ಸಿಸಿ/94/95, ದಿನಾಂಕ:07-11-2004 ಹಾಗೂ 20-02-1995ರಂತೆ ಸಂಪೂರ್ಣವಾಗಿ ತಾತ್ಕಾಲಿಕವಾಗಿ ಸೆಕ್ಯೂರಿಟಿ ವಾಚ್‌ಮನ್ ಆಗಿ ನೇಮಕ ಮಾಡಲಾಗಿದ್ದು, ಉಳಿದ ಸಿಬ್ಬಂದಿಯ ನೇಮಕಾತಿ ವಿವರಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ಸದರಿ ಸಿಬ್ಬಂದಿಗಳನ್ನು ಸಂಪೂರ್ಣವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿರುವುದರಿಂದ ಹೊರಗುತ್ತಿಗೆ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಮುಂದುವರೆದಂತೆ **ಸದರಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಏಜೆನ್ಸಿ ಮೂಲಕ ನೇಮಕಾತಿ ಮಾಡಿಕೊಳ್ಳಲು ಕ್ರಮ ವಹಿಸುವಂತೆ ವಿದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.**

- ಉಪ ಆಯುಕ್ತರು (ಕಲ್ಯಾಣ)ರವರ ಸಂಖ್ಯೆ:ಕ.ಅ/ಸಿ3/ಪಿ.ಆರ್:45/04-05, ದಿನಾಂಕ:06-10-2006 ರಂತೆ (ಕಡತದ ಪುಟ ಸಂಖ್ಯೆ 106ರಲ್ಲಿ ಲಗತ್ತಿಸಲಾಗಿದೆ) ಗೌರವ ಸಿಬ್ಬಂದಿಗಳನ್ನು ವಿದ್ಯಾ ಇಲಾಖೆಗೆ ನಿಯೋಜಿಸಲಾಗಿರುತ್ತದೆ. ಆದರೆ ಸದರಿಯವರನ್ನು ನೇಮಕ ಮಾಡಿಕೊಂಡಿರುವ ಯಾವುದೇ ವಿವರಗಳನ್ನು ವಿದ್ಯಾ ಇಲಾಖೆಗೆ ಕಳುಹಿಸಿರುವುದಿಲ್ಲ. ಟಿಪ್ಪಣಿ ಹಾಳೆ ಸಂಖ್ಯೆ-6 ಕಂಡಿಕೆ 19ರಂತೆ ಸದರಿಯವರುಗಳ ನೇಮಕಾತಿ ಮೂಲ ಕಡತವನ್ನು ಈ ಕಛೇರಿಗೆ ಕಳುಹಿಸುವಂತೆ ಉಪ ಆಯುಕ್ತರು (ಕಲ್ಯಾಣ)ರವರಿಗೆ ಕಡತವನ್ನು ರವಾನಿಸಲಾಗಿತ್ತು. ಅದರಂತೆ ವಾರ್ಡ್ ನಂ 78ರಲ್ಲಿನ ನೌಕರರುಗಳು ನೇಮಕಾತಿ ಹೊಂದಿರುವ ಮೂಲ ಕಡತವು ಕಛೇರಿಯಲ್ಲಿ ಇರುವುದಿಲ್ಲವೆಂದು ಹಾಗೂ ವಾರ್ಡ್ ನಂ 50ರಲ್ಲಿನ ನೌಕರರುಗಳು ನೇಮಕಾತಿ ಹೊಂದಿರುವ ಕಡತವು ರೆಕಾರ್ಡ್ ರೂಂ ನಲ್ಲಿದ್ದು, ಅದು ದೊರೆತ ಕೂಡಲೇ ಕಳುಹಿಸಲಾಗುವುದೆಂದು ತಿಳಿಸಿರುತ್ತಾರೆ. ಆದರೆ ಇದುವರೆವಿಗೂ ಯಾವುದೇ ಮೂಲ ಕಡತವನ್ನು ಈ ಕಛೇರಿಗೆ ಕಳುಹಿಸಿರುವುದಿಲ್ಲ.

- ಸದರಿಯವರು ಉಪ ಆಯುಕ್ತರು (ಕಲ್ಯಾಣ)ರವರ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢಶಾಲೆಗಳಲ್ಲಿ ಸುಮಾರು 6-7 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಶಿಕ್ಷಣ ಇಲಾಖೆಯ ಆಯವ್ಯಯ 25 ಶಿಕ್ಷಣ, ಸಾಮಾನ್ಯ ವೆಚ್ಚಗಳು, ತರಬೇತಿ ಕೇಂದ್ರಗಳಲ್ಲಿ ಸಿಬ್ಬಂದಿಗಳಿಗೆ ಗೌರವ ಸಂಭಾವನೆ (ಪಿ0959)ರಲ್ಲಿ ವೇತನವನ್ನು ಪಾವತಿಸಲಾಗುತ್ತಿದೆ.



10/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- ಸದರಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದಿಲ್ಲ. ಬದಲಾಗಿ ಗೌರವ ಸಂಭಾವನೆ ಆಧಾರದ ಮೇಲೆ ವೇತನ ಪಾವತಿಸಲಾಗುತ್ತಿದೆ
- ಸದರಿ ನೌಕರರುಗಳಿಗೆ ಫೆಬ್ರವರಿ 2012ರಿಂದ ಈ ತಹಲ್‌ವರೆವಿಗೂ . ವೇತನವನ್ನು ಪಾವತಿಸಿರುವುದಿಲ್ಲ.
- ಈ ಹಿನ್ನೆಲೆಯಲ್ಲಿ ತಡೆಹಿಡಿದಿರುವ ವೇತನವನ್ನು ಪಾವತಿಸುವ ಹಿನ್ನೆಲೆಯಲ್ಲಿ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಪಡೆಯಲು ಕಡತ ಮಂಡಿಸಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

Perused the documents made available in file. It is seen that initially the employees who are now working on Honorarium basis in the Education Department of the B.B.M.P wherein the welfare scheme which was parting with computer education in the local offices under the 18% scheme. After the closure of the computer training center, these employees were handed over to the Education department since, computer education was introduced in the syllabus. These officials were working in the Education department on Honorarium basis. It is also seen that these officials have been paid the Honorarium during the vacation period also.

It is also seen from the file that Additional Commissioner (Admn) has also sought for opinion as the whether these employees could be relived or continued. It is to be mentioned that earlier the authorities had sought for an opinion from the senior counsel Sri. Ashok Haranahalli in an identical issue. The senior counsel in his letter dated:11-02-2001 had opined that certain conditions should be imposed apart from the condition already stipulated. The said conditions are as follows:

I It should be categorically stated that the work undertaken by the corporation is a specified project work and the right to claim Honorarium would come to an end once the project comes to an end.
II. The teacher working in the Training Centres are temporarily working on a part time basis and they have no right to claim Honorarium once the project work is over.
III. The teacher are not working as against any vacant posts borne in the establishment of the Bangalore city corporation and they are not the employees of the corporation.

Ongoing through the file, it is seen that the above conditions are not forthcoming. Further, the Apex Court in Uma Devi's case had said down certain conditions relating to appointment to public services is as follows:

1. Any public employment has to be in terms of the Constitutional scheme.
2. Adherence to the rule of equality in public employment is a basic feature of our Constitution.
3. Regular appointment must be the rule.
4. A regular process of recruitment or appointment has to be resorted to, when regular vacancies in posts, at a particular point of time, are to be filled up.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5. The appointment should be in terms of relevant rules and after a proper competition among the qualified persons. Otherwise, such appointment would not confer any right on the appointee.
6. If a contractual appointment is made, the appointment comes to an end at the end of the contractor. The Government or the instrumentality of the State cannot confer any permanency of such employment either by way of regularization or by way of absorption.
7. If it were an engagement or appointment on daily wages or casual basis, the same would come to an end when it is discontinued.
8. A temporary employee could not claim to be made permanent on the expiry of his term of appointment.
9. Merely because a temporary employee or a casual wage worker is continued for a time being beyond the term of his appointment, he would not be entitled to be absorbed in regular service or made permanent, merely on the strength on such continuance, if the original appointment was not made by following a due process of selection as envisaged by the relevant rules.
10. Regularization is not a mode of appointment.
11. Regularization can be only of irregular appointment.
12. Regularization of an illegal appointment is not permissible in law. It is not permissible in law, to confer permanence in the employee, whose appointment is illegal.
13. The Government or the instrumentality of the State cannot regularize the appointment made contrary to the course of selection as envisaged by the relevant rules.
14. The high Court acting under Article 226 of the Constitution of India should not ordinarily issue directions for absorption, regularization or permanent continuance unless the recruitment itself was made regularly and in terms of the constitutional scheme.
15. There should be no further by-passing of the constitutional requirement and regularization or making permanent those not duly appointed as per the constitutional scheme.

In view of the above judgment, it is not possible to regularize the employees who were appointed for a particular project. The employees will have to go as the project has been winded up. If their services are required by the Education department, then they may be obtained through outsourcing agency. Further, it is possible to examine the payment made to them during the vacation period.

ಮೇಲ್ಕಂಡ ವರದಿಗಳನ್ವಯ ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೌರವ ಸಿಬ್ಬಂದಿಗಳ ಕುರಿತಂತೆ ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:23.08.2013ರ ಸಂಖ್ಯೆ:ವಿದ್ಯಾ(2)ಪಿಆರ್–26/13–14 ಟಿಪ್ಪಣಿ.

**ನಿರ್ಣಯ: ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸ್ಪಷ್ಟೀಕರಣ/ವಿವರಣೆಗಳೊಂದಿಗೆ ಮರು ಮಂಡಿಸುವುದು**

1) ಪ್ರಸ್ತಾವನೆಯು ಅಸ್ಪಷ್ಟವಾಗಿರುತ್ತದೆ.

[signature] 16/10/13

2) ಕಾನೂನು ಕೋಶದ ಮುಖ್ಯಸ್ಥರು ದಿನಾಂಕ: 02-05-2013 ರಂದು ನೀಡಿರುವ ಅಭಿಪ್ರಾಯದಂತೆ ಕ್ರಮವಹಿಸಲು ಹಿಂದಿನ ಆಯುಕ್ತರು ದಿ:17-05-2013 ರಂದೇ ಆದೇಶಿಸಿದ್ದರೂ ಸಹ ಕ್ರಮಕೈಗೊಳ್ಳದೇ ಇರುವ ಬಗ್ಗೆ ಔಚಿತ್ಯವೇನು?

3) ಟಿಪ್ಪಣಿಯಲ್ಲಿ ತಿಳಿಸಿರುವಂತೆ ಇವರುಗಳ ನೇಮಕಾತಿ ಸಂಬಂಧ ಮೂಲ ಕಡತವು ಲಭ್ಯವಿರುವುದಿಲ್ಲವಾದ್ದರೆ ಇದಕ್ಕೆ ಜವಾಬ್ದಾರರು ಯಾರು? ಮೂಲ ಕಡತವನ್ನು ಹುಡುಕಲು ಕೈಗೊಂಡಿರುವ ಕ್ರಮಗಳೇನು?

4) ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯದಂತೆ ಇವರುಗಳ ಸೇವೆ ಅಗತ್ಯವಿದ್ದಲ್ಲಿ ಹೊರ ಗುತ್ತಿಗೆ ಮೂಲಕ ಪಡೆಯಲು ಕ್ರಮವಹಿಸಬೇಕಾದ್ದು ಇದಕ್ಕೆ ಪೂರಕವಾಗಿ ನಿಯಮಾನುಸಾರ ಕ್ರಮ ಜರುಗಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆಯೆ?.

5. ಗೌರವಧನದ ಆಧಾರದ ಮೇಲೆ ಇವರುಗಳನ್ನು ಯಾವ ಅವಧಿಯವರೆಗೆ ಮುಂದುವರೆಸಲಾಗಿದೆ ? ಈ ಬಗ್ಗೆ ಆಯುಕ್ತರ/ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲಾಗಿದೆಯೆ?

**...ಷ ಸಂಖ್ಯೆ: ಸಿಆಸುಸ್ಥಾಸ/04/2013-14**

**...ಯ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ... ಉಪ ಆಯುಕ್ತರುಗಳ/ಜಂಟಿ ಆಯುಕ್ತರುಗಳ ಹುದ್ದೆಯಲ್ಲಿ ಕರ್ನಾಟಕ ಆಡಳಿತ ಸೇವೆ ...ಎಸ್)ಯ ಅಧಿಕಾರಿಗಳು ಕಾರ್ಯನಿರ್ವಹಿಸಬೇಕಾಗಿದ್ದರೂ ಸಹ ನಿಯಮಬಾಹಿರವಾಗಿ ಈ ...ಗಳಲ್ಲಿ ಕೆ.ಎ.ಎಸ್‌ಯೇತರ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವುದು ಸಮಿತಿಯ ಗಮನಕ್ಕೆ ...ದ್ದು ಈ ಪೈಕಿ ಕೆಲವು ಕೆ.ಎ.ಎಸ್ ಯೇತರ ಅಧಿಕಾರಿಗಳು ಸುಮಾರು 3 ವರ್ಷಗಳಿಗೂ ಅಧಿಕವಾಗಿ ...ಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಪಾಲಿಕೆಯ ...ಕಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹಾಲಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ...ಎಸ್‌ಯೇತರ ಅಧಿಕಾರಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ಹಾಗೂ ಈ ...ಳಿಗೆ ಕೆ.ಎ.ಎಸ್ ಅಧಿಕಾರಿಗಳನ್ನು ನಿಯೋಜಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ...ುಕ್ತರವರಿಗೆ ಸೂಚಿಸುವ ಬಗ್ಗೆ ಸಮಿತಿಯು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಈ ...ಂಡ ಮಾಹಿತಿಯನ್ನು ಒದಗಿಸುವಂತೆ ಆಯುಕ್ತರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ...ರ್ಮಾನಿಸಿದೆ.

1. ಹಾಲಿ ಪಾಲಿಕೆಯಲ್ಲಿ ಜಂಟಿ/ಉಪ ಆಯುಕ್ತರುಗಳ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆ.ಎ.ಎಸ್ ಯೇತರ ಅಧಿಕಾರಿಗಳ ಹೆಸರುಗಳನ್ನು ಒದಗಿಸುವುದು
2. ಇವರುಗಳ ಮಾತೃ ಇಲಾಖೆಯ ವಿವರ ಹಾಗೂ ಮಾತೃ ಇಲಾಖೆಯಲ್ಲಿ ಇವರ ಪದನಾಮದ ಬಗ್ಗೆ ವಿವರಗಳನ್ನು ಒದಗಿಸುವುದು
3. ಇವರುಗಳ ವೇತನ ಶ್ರೇಣಿ ಹಾಗೂ ವಿದ್ಯಾರ್ಹತೆ ಬಗ್ಗೆ ಮಾಹಿತಿಯನ್ನು ಒದಗಿಸುವುದು
   ಇವರುಗಳು ಪಾಲಿಕೆಗೆ ನಿಯೋಜನೆಗೊಂಡ ದಿನಾಂಕ ಹಾಗೂ ಸದರಿಯವರಿಗೆ ಸರ್ಕಾರವು ನಿಗದಿಪಡಿಸಿರುವ ನಿಯೋಜನಾ ಅವಧಿಯ ಬಗ್ಗೆ ಮಾಹಿತಿಗಳನ್ನು ಒದಗಿಸುವುದು

6/10/13

Sd/- 6/10/13

134

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಷಯ ಸಂಖ್ಯೆ: ಸಿಆಸುಸ್ಥಾಸ/05/2013-14**

**ನಿರ್ಣಯ:**

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮಾವಳಿಗಳ ರೀತ್ಯಾ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ಮಾತ್ರ ಅಭಿಯಂತರರುಗಳನ್ನು ನಿಯೋಜಿಸಿಕೊಳ್ಳಲು ಅವಕಾಶವಿದ್ದು ಪ್ರಸ್ತುತ ಪಾಲಿಕೆಗೆ ನಿಯೋಜನೆ ಮೇರೆಗೆ KPTCL, KPC, BESCOM, BWSSB, KSFC ಹಾಗೂ ಇನ್ನಿತರೆ ಸಂಸ್ಥೆಗಳ ಅಭಿಯಂತರರುಗಳು ಸರ್ಕಾರದ ಆದೇಶದ ರೀತ್ಯಾ ಹಾಜರಾತಿ ಸಲ್ಲಿಸುತ್ತಿರುವುದು ಸರಿಯಷ್ಟೇ ಆದರೆ ಈ ಪೈಕಿ KPTCL, KPC, BESCOM, BWSSB, KSFC ಹಾಗೂ ಇನ್ನಿತರೆ ಸಂಸ್ಥೆಗಳಿಂದ ಬರುವ ಅಭಿಯಂತರರ ವೇತನ ಶ್ರೇಣಿಯು PWD/ ಪಾಲಿಕೆಯ ಅಭಿಯಂತರರ ವೇತನ ಶ್ರೇಣಿಗಿಂತ ಹೆಚ್ಚಿನದಾಗಿದ್ದು ಇದರಿಂದಾಗಿ ವಿನಾಕಾರಣ ಪಾಲಿಕೆಗೆ ಆರ್ಥಿಕವಾಗಿ ಹೆಚ್ಚಿನ ಹೊರೆಯುಂಟಾಗುತ್ತಿರುವುದು ಸರಿಯಷ್ಟೇ, ಸದರಿ ಸಂಸ್ಥೆಗಳಿಂದ ಬರುತ್ತಿರುವ ಅಭಿಯಂತರರುಗಳು ಯಾವುದೇ ವಿಧವಾದ ಹೆಚ್ಚಿನ ತಾಂತ್ರಿಕ ಕೌಶಲ್ಯತೆಯಾಗಲಿ, ಸಾಕಷ್ಟು ಅನುಭವವಾಗಲಿ ಹೊಂದಿಲ್ಲದೆ ಇದ್ದು ಇವರು ಸಾಮಾನ್ಯ ಪರಿಜ್ಞಾನ ಉಳ್ಳವರಾಗಿದ್ದು ಇವರುಗಳಿಂದ ಪಾಲಿಕೆಗೆ ಯಾವುದೇ ವಿಧವಾದ ಹೆಚ್ಚಿನ ಉಪಯುಕ್ತತೆ ಇಲ್ಲದಿರುವುದು ಸ್ಪಷ್ಟವಾಗಿದ್ದಾಗ್ಯೂ ಸಹ ಇವರುಗಳನ್ನು ನಿಯೋಜಿಸಿಕೊಂಡು ಪಾಲಿಕೆಯು ಅತಿ ಹೆಚ್ಚಿನ ಆರ್ಥಿಕ ಹೊರೆಯನ್ನು ಭರಿಸುತ್ತಿರುವುದು ದುರಧೃಷ್ಟಕರವೆಂದು ಪರಿಗಣಿಸಿ, ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಹೊರತುಪಡಿಸಿ KPTCL, KPC, BESCOM, BWSSB, KSFC ಹಾಗೂ ಇನ್ನಿತರೆ ಸಂಸ್ಥೆಗಳಿಂದ ಎರವಲು ಸೇವೆಯ ಮೇಲೆ ಪಾಲಿಕೆಗೆ ನಿಯೋಜನೆಗೊಂಡಿರುವ ಅಭಿಯಂತರರುಗಳನ್ನು ಮಾತ್ರ ಇಲಾಖೆಗೆ ಹಿಂದಿರುಗಿಸುವಂತೆ ಆಯುಕ್ತರನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/29/2011-12**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ್ದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ ಸಂಬಂಧ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿ: 13-10-2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 06-09-2011 ರ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳು ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಆದ್ದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 08-09-2011 ರ ಕರ್ನಾಟಕ ರಾಜ್ಯಪತ್ರದ ಭಾಗ-iv ಎ (ಪಿ.ಆರ್.ಸಂ 808) ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ:

Reddy 10/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸದರಿ ರಾಜ್ಯಪತ್ರವನ್ನು ದಿನಾಂಕ: 08-09-2011 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಮತ್ತು ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ (14) ರ 8ನೇ ಪ್ರಕರಣದೊಂದಿಗೆ+ ಓದಿಕೊಂಡ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಎಂದರೆ:

**ನಿಯಮಗಳು**

1) **ಶಿರೋನಾಮೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು 2011 ಎಂದು ಕರೆಯತಕ್ಕದ್ದು.

2) ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 1 ಕ್ಕೆ ತಿದ್ದುಪಡಿ:**- ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು) ನಿಯಮ 1 ರ ಉಪ ನಿಯಮ (3) ರಲ್ಲಿ " ಮೃತ ಸರ್ಕಾರಿ ನೌಕರ" ಎಂಬ ಪದಗಳ ನಂತರ ಅಥವಾ " ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿ ಸರ್ಕಾರಿ ನೌಕರ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **ಹೊಸ ನಿಯಮ 3 ಅ ರ ಸೇರ್ಪಡೆ:**- ಸದರಿ ನಿಯಮಗಳ ನಿಯಮ 3 ರ ನಂತರ ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು ಅಂದರೆ:-

3. **ಅ. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ**

(1) ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರು ಈ ನಿಯಮಗಳ ವ್ಯಾಪಕತೆಗೆ ಹಾನಿ ಉಂಟು ಮಾಡದಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಾಗುತ್ತಾರೆ.

(2) ಈ ನಿಯಮಗಳು ನಿಯಮ 9ನ್ನು ಹೊರತುಪಡಿಸಿ ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಅನ್ವಯವಾಗುವ ಅರ್ಹತೆಯ ಎಲ್ಲಾ ಷರತ್ತುಗಳು ನೇಮಕಾತಿ ನಿಬಂಧನೆಗಳು ಮತ್ತು ಅರ್ಜಿ ಸಲ್ಲಿಸುವ ಮತ್ತು ನೇಮಕಾತಿ ಮಾಡುವ ಕಾರ್ಯ ವಿಧಾನದ ನಿಯಮಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರನ ಅವಲಂಬಿತರಿಗೆ ನೌಕರನು ನಿವೃತ್ತಿ ಹೊಂದಿದ ದಿನಾಂಕದಿಂದ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗುತ್ತದೆ.

**ಪರಂತು, ಕರ್ನಾಟಕ ಸಿವಿಲ್ ಸೇವಾ ( ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಜಾರಿಗೆ ಬಂದ ದಿನಾಂಕದಂದು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅರ್ಹ ಅವಲಂಬಿತರು ಸದರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸತಕ್ಕದ್ದು.**

18/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿವರಣೆ:** ಈ ನಿಯಮಗಳು ಉದ್ದೇಶಕ್ಕಾಗಿ:

(i) "ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ" ಎಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಚಿತವಾದ ವೈದ್ಯಕೀಯ ಮಂಡಳಿಯು ನೀಡಿದ ಪ್ರಮಾಣ ಪತ್ರದನ್ವಯ ಸಾರ್ವಜನಿಕ ಸೇವೆಯ ಮೇಲೆ ಕರ್ತವ್ಯದಲ್ಲಿರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾಗಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳನ್ವಯ 1ನೇ ಜನವರಿ 2010 ರಂದು ಅಥವಾ ತದನಂತರ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ.

(ii) "ಕರ್ತವ್ಯದ ಮೇಲಿರುವಾಗ" ಎಂಬ ಪದಗಳು ಮನೆಯಿಂದ ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಹೋಗಿಬರುವ ಪ್ರಮಾಣವನ್ನು ಒಳಗೊಂಡಿರುತ್ತವೆ.

(iii) ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಪರಿಭಾಷಿಸಿರುವ " ಅವಲಂಬಿತರು" ಮತ್ತು ಕುಟುಂಬದ ಸದಸ್ಯರು" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅವಲಂಬಿತರಿಗೂ ಆರ್ಥೈಸಲ್ಪಡತಕ್ಕದ್ದು.

(iv) ಈ ನಿಯಮಗಳಲ್ಲಿ ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ನಮೂದಾಗಿರುವ "ವಿಧವೆ" ಅಥವಾ "ವಿಧುರ" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಕ್ರಮವಾಗಿ " ಪತ್ನಿ" ಅಥವಾ ' ಪತಿ' ಎಂದು ಪರಿಗಣಿಸಲ್ಪಡತಕ್ಕದ್ದು.

ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ವರದಿಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿರುವ ದಿನಾಂಕ: 13-10-2011 ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ರ ನಿಯಮ 1 ರ ಉಪ ನಿಯಮ (3) ರಲ್ಲಿ ಮೃತ ಸರ್ಕಾರಿ ನೌಕರ ಎಂಬ ಪದಗಳ ನಂತರ ಅಥವಾ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರ ಎಂಬ ಪದಗಳನ್ನು ಸೇರಿಸಿಕೊಂಡು ಹೊಸ ನಿಯಮ 3(ಅ) ರ ಸೇರ್ಪಡಿಸಿಕೊಂಡು ಹೊರಡಿಸಲಾಗಿರುವ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಟಿಪ್ಪಣಿಯನ್ನು ತಯಾರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಆದೇಶ ಕೋರಿರುವುದು ಕಂಡುಬರುತ್ತದೆ. ಆದುದರಿಂದ ಪಾಲಿಕೆಯಲ್ಲಿ ನಿಯಮಾವಳಿಗಳಂತೆ ಸದರಿ ಅಧಿಸೂಚನೆಯನ್ನು ಅಳವಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಜಂಟಿ ಆಯುಕ್ತರು (ಆರೋಗ್ಯ) ರವರು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 13-10-2011 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಬಹುದು ಎಂದು ದಿನಾಂಕ: 07-02-2012 ರಂದು ಕಡತದಲ್ಲಿ ವರದಿಯನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ದಿನಾಂಕ: 13-10-2011 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ



15/10/15

ಪಾಲಿಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಟ್ಟದಲ್ಲಿ
ು ಮೇಲೆ
ಕರ್ನಾಟಕ
ವೈದ್ಯಕೀಯ
ಸ್ಥಳಕ್ಕೆ
ುಟುಂಬದ
ನೌಕರರ
ಅಥವಾ
ನೌಕರರ
ಆಡಳಿತ
ಸೇಅನೇ
966 ರ
ದ್ಯಕೀಯ
3(ಅ)
ಬಗ್ಗೆ
ಆದೇಶ
ಯನ್ನು
ರೆಯು
ೃಹತ್
2012
ಗಳ
ಡುವ
ನ್ನು
ಂದಿ

ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 14-02-2012 ರ ಬಿ12 (5ಜಿ) ಪಿಆರ್/240/11-12 ರ ಟಿಪ್ಪಣಿ.

ಈ ಕುರಿತಂತೆ ದಿ:02-03-2012 ರಂದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಅವರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

1. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1966 ರ ಅಥವಾ 1996 ರ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವುದು.
2. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಜಾರಿ ಮಾಡಲಾಗಿರುವ ಮಾರ್ಗಸೂಚಿಗಳು ಹಾಗೂ ಷರತ್ತುಗಳ ವಿವರಗಳೊಂದಿಗೆ

ನ್ಯೂನತೆಗೆ ಸಂಬಂಧಿಸಿದಂತೆ ಆಯುಕ್ತರ ಆದೇಶದ ಪ್ರಕಾರ ಅಪರ ಆಯುಕ್ತರು (ಆಡಳಿತ) ರವರು ತಮ್ಮ ಕಛೇರಿ ಟಿಪ್ಪಣಿ ಮುಖೇನ ಸ್ಪಷ್ಟೀಕರಣ ನೀಡಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 14-02-2012 ರ ಸಂಖ್ಯೆ: ಬಿ12 (5ಜಿ) ಪಿಆರ್/240/11-12 ರ ಟಿಪ್ಪಣಿಯ ಬಗ್ಗೆ ಕೈಗೊಳ್ಳಬೇಕಾಗಿರುವ ನಿರ್ಣಯ

**ನಿರ್ಣಯ:** ಆಯುಕ್ತರ ದಿನಾಂಕ: 14-02-2012 ರ ಟಿಪ್ಪಣಿಯನ್ನು ಒಪ್ಪುತ್ತಾ ಇನ್ನು ಮುಂದೆ ಇಂತಹ ಪ್ರಕರಣಗಳಲ್ಲಿ ವಿನಾ:ಕಾರಣ ವಿಳಂಬ ಮಾಡತಕ್ಕದಲ್ಲ ಎಂದು ಸಮಿತಿಯು ಎಚ್ಚರಿಸಿದೆ.

Reddy 18/10/13

ಲಕ್ಷ್ಮೀಕಾಂತ ರೆಡ್ಡಿ
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ.
3. ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ
6. ಅಪರ ಆಯುಕ್ತರು/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ
7. ವಿದ್ಯಾಧಿಕಾರಿಗಳು ರವರಿಗೆ ಸೂಕ್ತ ಕ್ರಮಕ್ಕಾಗಿ
8. ಕೌನ್ಸಿಲ್ ಕಾರ್ಯದರ್ಶಿಗಳು
9. ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ದಿನಾಂಕ: 07-10-2013 ರಂದು ಕೈಗೊಂಡ ಜಂಟಿ ಆಯುಕ್ತರು ದಾಸರಹಳ್ಳಿ ಕಛೇರಿ ಹಾಗೂ ಸಂಕೀರ್ಣದಲ್ಲಿರುವ ಇತರೆ ಕಛೇರಿಗಳ ತಪಾಸಣಾ ವರದಿ**

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಲಕ್ಷ್ಮಿಕಾಂತರೆಡ್ಡಿ | – ಅಧ್ಯಕ್ಷರು | ಉಪ ಆಯುಕ್ತರು (ಆಡಳಿತ) |
| 2. ಅಶ್ವಥನಾರಾಯಣಗೌಡ | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3. ಕೆ ಮಹೇಶ್ ಬಾಬು | – ಸದಸ್ಯರು | |
| 4. ಹೆಚ್.ಎಸ್.ಲಲಿತ | – ಸದಸ್ಯರು | |
| 5. ಎಂ.ಜಿ ಜಯರತ್ನ | – ಸದಸ್ಯರು | |
| 6. ವಿ.ಆನಂದ್ | – ಸದಸ್ಯರು | |
| 7. ಲಾವಣ್ಯ ಗಣೇಶ್ ರೆಡ್ಡಿ | – ಸದಸ್ಯರು | |
| 8. ಜೆ. ವರಲಕ್ಷ್ಮಿ | – ಸದಸ್ಯರು | |
| 9. ಎಸ್. ಜಯಪಾಲ | – ಸದಸ್ಯರು | |
| 10. ಎಂ.ಕೆ. ಗುಣಶೇಖರ್ | – ಸದಸ್ಯರು | |

ದಿನಾಂಕ: 07-10-2013 ರಂದು ಮಧ್ಯಾಹ್ನ 2.15 ರ ಸಮಯಕ್ಕೆ ಜಂಟಿ ಆಯುಕ್ತರು ದಾಸರಹಳ್ಳಿ ಕಛೇರಿಯ ಕಟ್ಟಡ ಸಂಕೀರ್ಣಕ್ಕೆ ಸಮಿತಿಯು ತಪಾಸಣೆ ಕೈಗೊಂಡಿದ್ದು ಈ ಸಂದರ್ಭದಲ್ಲಿ ದಾಸರಹಳ್ಳಿ ವಲಯ ನಿಯಂತ್ರಣ ಕೊಠಡಿಯನ್ನು ಪರಿಶೀಲಿಸಿದಾಗ, ಅಧಿಕಾರಿಗಳು ರಾತ್ರಿ ವೇಳೆ ತಪಾಸಣೆ ಮಾಡಿದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳ ವಿವರಗಳನ್ನು ನಮೂದಿಸಿರುವ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ನಿಯಂತ್ರಣ ಕೊಠಡಿಯಲ್ಲಿ ಇರಬೇಕಾದ ತುರ್ತು ನಿರ್ವಹಣಾ (ಸ್ಕ್ವಾಡ್) ಸಿಬ್ಬಂದಿ ಬಗ್ಗೆ ಮಾಹಿತಿ ಕೇಳಲಾಗಿ ಯಾವುದೇ ಸಿಬ್ಬಂದಿವರ್ಗದವರು ಲಭ್ಯವಿಲ್ಲದಿರುವುದು ಕಂಡುಬಂದಿರುತ್ತದೆ. ಪ್ರಹರಿ ವಾಹನವು ದುರಸ್ಥಿಗೊಂಡು ಕಾರ್ಯನಿರ್ವಹಿಸುತ್ತಿರುವುದಿಲ್ಲ.

ಟಪಾಲು ವಿಭಾಗ ಮತ್ತು ನಾಗರೀಕ ಸೇವಾ ಕೇಂದ್ರದಲ್ಲಿ ಸಿಬ್ಬಂದಿ ವರ್ಗದವರು ಹಾಜರುವುದಿಲ್ಲ ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ವಿತರಿಸುವ ಉಪ ನೊಂದಾಣಿಗಾರ ಕಛೇರಿಗೆ ಭೇಟಿ ನೀಡಿದ್ದು ನೊಂದಾಣಿ ಪುಸ್ತಕಗಳನ್ನು ಆಂಗ್ಲ ಭಾಷೆಯಲ್ಲಿ ನಿರ್ವಹಣೆ ಮಾಡಿರುವುದನ್ನು ಗಮನಿಸಲಾಗಿರುತ್ತದೆ. ಈ ಬಗ್ಗೆ ಸಮತಿಯು ತೀವ್ರ ಆಕ್ರೋಶ ವ್ಯಕ್ತಪಡಿಸಿರುತ್ತದೆ. ಈ ಕಛೇರಿಯಲ್ಲಿ E-Governance ಮುಖೇನ (ಆನ್ ಲೈನ್) ಜನನ ಮತ್ತು ಮರಣ ಪತ್ರಗಳನ್ನು ವಿತರಿಸದೇ ಇರುವುದನ್ನು ಗಮನಿಸಲಾಗಿದೆ ಹಾಗೂ ಅರ್ಜಿ ವಿಲೇವಾರಿ ಮಾಡಲು ಬಾಕಿ ಇರುವ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ. ಜನನ /ಮರಣ ಪ್ರಮಾಣ ಪತ್ರಗಳು ಸಹಿಯಾಗಿ ಹಲವಾರು ತಿಂಗಳುಗಳು ಕಳೆದಿದ್ದರೂ ಸಹ ವಿಲೇವಾರಿ ಮಾಡದೇ



(Signature) 16/10/13

ಇಟ್ಟಿರುತ್ತಾರೆ. ಈ ಕಛೇರಿಯಲ್ಲಿ ಕ್ಯಾಷ್ ರಿಜಿಸ್ಟರ್ ನಿರ್ವಹಣೆ ಮಾಡಿರುವುದಿಲ್ಲ. 30-09-2013 ರಿಂದ ವಸೂಲಾಗಿರುವ ಸಾರ್ವಜನಿಕ ಹಣವನ್ನು ಬ್ಯಾಂಕಿಗೆ ಪಾವತಿಸಿರುವುದಿಲ್ಲ ಹಾಗೂ ಕಛೇರಿಯಲ್ಲಿ ಬ್ಯಾಂಕ್ ಪಾಸ್ ಷೀಟ್ ನಿರ್ವಹಣೆ ಮಾಡಿರುವುದಿಲ್ಲ. ಕಛೇರಿಯಲ್ಲಿ ಇದ್ದ ಸಿಬ್ಬಂದಿಗಳು ಸಮಿತಿಯು ಕೇಳಲಾದ ಯಾವುದೇ ಮಾಹಿತಿಗಳನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಇಲ್ಲಿನ ನ್ಯೂನತೆಗಳನ್ನು ಹಾಗೂ ಸಿಬ್ಬಂದಿವರ್ಗದವರ ಕರ್ತವ್ಯಲೋಪವನ್ನು ತಪಾಸಣೆ ಸಂದರ್ಭದಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೇ ಖುದ್ದಾಗಿ ಗಮನಿಸಿರುತ್ತಾರೆ.

ತಪಾಸಣೆ ಸ್ಥಳಕ್ಕೆ ದಾಸರಹಳ್ಳಿ ವಲಯದ ಮಾನ್ಯ ಶಾಸಕರಾದ ಶ್ರೀ ಮುನಿರಾಜು ರವರು ಆಗಮಿಸಿ ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಸಮಾನ ಕೆಲಸ ಸಮಾನ ವೇತನ ಪಡೆಯುತ್ತಿರುವ ನೌಕರರು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿದಲ್ಲದೇ ಸದರಿಯವರುಗಳು ಕೆಲಸಕ್ಕೆ ಹಾಜರಾತಿ ಸಲ್ಲಿಸಿ ಯಾವುದೇ ಕೆಲಸಗಳನ್ನು ನಿರ್ವಹಿಸದೇ ಪ್ರತಿ ಮಾಹೆ ವೇತನವನ್ನು ಪಡೆಯುತ್ತಿದ್ದು ಈ ಬಗ್ಗೆ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

ದಾಸರಹಳ್ಳಿ ವಲಯ ಕಛೇರಿ ಸಂಕೀರ್ಣದಲ್ಲಿ ಬಯೋಮೆಟ್ರಿಕ್ ಯಂತ್ರವಿದ್ದರೂ ಹಾಜರಾತಿಯನ್ನು ಬಯೋಮೆಟ್ರಿಕ್ ವ್ಯವಸ್ಥೆಯಡಿಯಲ್ಲಿ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಉಪ ಆಯುಕ್ತರು (ದಾಸರಹಳ್ಳಿ) ವಿಚಾರಿಸಲಾಗಿ ಯಂತ್ರವು ದುರಸ್ಥಿಗೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ದುರಸ್ಥಿಗೊಂಡಿರುವ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡಿರುವುದಿಲ್ಲ ಹಾಗೂ ಯಂತ್ರವನ್ನು ಸರಿಪಡಿಸಲು ಯಾವುದೇ ಕ್ರಮವನ್ನು ಕೈಗೊಳ್ಳದೇ ಬೇಜವಾಬ್ದಾರಿತನ ತೋರಿರುತ್ತಾರೆ. ಕಂಪ್ಯೂಟರ್ ಆಪರೇಟರ್‌ಗಳಿಗಾಗಿಯೇ ತೆರೆಯಲಾಗಿರುವ ಪ್ರತ್ಯೇಕ ಹಾಜರಾತಿ ಪುಸ್ತಕದಲ್ಲಿ ಕೆಲವು ಕಂಪ್ಯೂಟರ್ ಆಪರೇಟರ್‌ಗಳು ಸಹಿ ಮಾಡಿರುವುದಿಲ್ಲ. ಹಾಜರಾತಿ ಪುಸ್ತಕವನ್ನೂ ಸಹ ಸಮರ್ಪಕವಾಗಿ ನಿರ್ವಹಣೆ ಮಾಡಿರುವುದಿಲ್ಲ. ಜಂಟಿ ಆಯುಕ್ತರು ದಾಸರಹಳ್ಳಿ ರವರು ಹಾಜರಾತಿ ಪುಸ್ತಕವನ್ನು ಪರಿಶೀಲಿಸದೇ ಇರುವುದು ಕಂಡುಬಂದಿರುತ್ತದೆ. ಕಛೇರಿ ಸಿಬ್ಬಂದಿವರ್ಗದವರು ಗುರುತಿನ ಚೀಟಿ ಧರಿಸದೇ ಇರುವುದು ಹಾಗೂ ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸಿಲ್ಲದೇ ಇರುವುದು ಕಂಡುಬಂದಿರುತ್ತದೆ. ದಾಸರಹಳ್ಳಿ ವಲಯಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಕೇಳಿದರೂ ಜಂಟಿ ಆಯುಕ್ತರು ಸಮರ್ಪಕವಾದ ಮಾಹಿತಿಯನ್ನು ಒದಗಿಸಿರುವುದಿಲ್ಲ. ಜಂಟಿ ಆಯುಕ್ತರವರ ಕಛೇರಿಯಲ್ಲಿ ನಗದು ಘೋಷಣೆ ಪುಸ್ತಕ, ಚಲನವಲನ ಪುಸ್ತಕ, ನಗದು ಪುಸ್ತಕಗಳನ್ನು ನಿರ್ವಹಣೆ ಮಾಡಿಲ್ಲದೇ ಇರುವುದನ್ನು ಗಮನಿಸಲಾಗಿರುತ್ತದೆ. ಇಡೀ ಕಛೇರಿ ಸಂಕೀರ್ಣವು ಅಶುಚಿತ್ವದಿಂದ ಕೂಡಿರುತ್ತದೆ.

ಕಂದಾಯ ಅಧಿಕಾರಿಗಳ ಕಛೇರಿಗೆ ಭೇಟಿ ನೀಡಿದ್ದು ಈ ಸಂದರ್ಭದಲ್ಲಿ ಕಂದಾಯ ಅಧಿಕಾರಿಗಳು ದಾಖಲೆಗಳಿರುವ ಅಲ್ಮರಾಕ್ಕೆ ಬೀಗ ಹಾಕಿಕೊಂಡು ಗೈರು ಹಾಜರಿ ಆಗಿರುವುದು ಕಂಡುಬಂದಿರುತ್ತದೆ. ಕಛೇರಿಯಲ್ಲಿ ಆಷೀಲು ನೊಂದಾಣಿ ಪುಸ್ತಕವನ್ನು ನಿರ್ವಹಿಸದೇ ಇರುವುದನ್ನು ಸಹ ಗಮನಿಸಲಾಗಿರುತ್ತದೆ. ಹಾಗೂ ಕಛೇರಿಯಲ್ಲಿದ್ದ ಸ್ವೀಕೃತಿ ಗುಮಾಸ್ತರು ವ್ಯಯಕ್ತಿಕ ನೊಂದಣಿ ಪುಸ್ತಕವನ್ನು ಸಮರ್ಪಕವಾಗಿ ನಿರ್ವಹಿಸದಿರುವುದನ್ನು ಗಮನಿಸಲಾಗಿರುತ್ತದೆ.

Liedal 16/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂತರ ನಗರ ಯೋಜನೆ ವಿಭಾಗಕ್ಕೆ ಭೇಟಿ ನೀಡಿ ಎಲ್‌ಪಿ ರಿಜಿಸ್ಟರ್, ನಗದು ಪುಸ್ತಕ, ಬ್ಯಾಂಕ್ Remittance Book ಹಾಗೂ ಬಾಕಿ ಇರುವ/ಮಂಜೂರಾಗಿರುವ ನಕ್ಷೆ ಕಡತಗಳನ್ನು ಪರಿಶೀಲಿಸಲಾಗಿ ಇವುಗಳಲ್ಲಿ ಹಲವಾರು ನ್ಯೂನತೆಗಳು ಇರುವುದು ಕಂಡುಬಂದಿರುತ್ತದೆ. ಹಾಜರಿದ್ದಂತಹ ಸಹಾಯಕ ನಿರ್ದೇಶಕರು ನಗರ ಯೋಜನೆ ರವರು ಹಾಗೂ ನಗರ ಯೋಜಕರು (AE) ಸಮಿತಿಯು ಕೇಳಿದ ಮಾಹಿತಿಯನ್ನು ನೀಡುವಲ್ಲಿ ಪೂರ್ಣಪ್ರಮಾಣದಲ್ಲಿ ವಿಫಲರಾಗಿದ್ದಲ್ಲದೇ ಸಮಿತಿಗೆ ತಪ್ಪು ಮಾಹಿತಿ ನೀಡಿರುತ್ತಾರೆ. ಸಮಿತಿಯ ಕೋರಿದ ಯಾವುದೇ ದಾಖಲೆಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ ಹಾಗೂ ಹಣಕಾಸಿನ ವ್ಯವಹರಣೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನೀಡಲು ವಿಫಲರಾಗಿರುತ್ತಾರೆ. ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅರ್ಜಿದಾರರು ಸಲ್ಲಿಸಿರುವ ಡಿ.ಡಿ ಗಳನ್ನು ಬ್ಯಾಂಕಿಗೆ ಪಾವತಿಸದೇ ಕಡತಗಳಲ್ಲಿಯೇ ಉಳಿಸಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಸದರಿ ವಿಭಾಗದಲ್ಲಿ ಮೇಲ್ನೋಟಕ್ಕೆ ಹಣ ದುರುಪಯೋಗವಾಗಿರುವ ಬಗ್ಗೆ ಹಲವಾರು ಅನುಮಾನಗಳು ಕಂಡುಬಂದಿದ್ದು ಕೂಡಲೇ ಇವರುಗಳನ್ನು ಸಾರ್ವಜನಿಕ ಸಂಪರ್ಕವಿಲ್ಲದ ಸ್ಥಳಕ್ಕೆ ವರ್ಗಾಹಿಸಿ ದಕ್ಷರಾದವರನ್ನು ನೇಮಿಸಲು ಸೂಚಿಸಿದೆ.

ನಂತರ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಭೇಟಿ ನೀಡಿ ಕ್ಯಾಷ್ ಪುಸ್ತಕ, ಬಿ.ಆರ್ ರಿಜಿಷ್ಟರ್, ಎಂ.ಬಿ.ಪುಸ್ತಕ ಲೆಕ್ಕ ಪುಸ್ತಕ, ಲೆಕ್ಕ ಪರಿಶೋಧನಾ ವರದಿಗಳು, Remittance Book, Tender open register, EMD register ಗಳನ್ನು ಹಾಜರು ಪಡಿಸುವಂತೆ ತಿಳಿಸಲಾಗಿ ಕ್ಯಾಷ್ ರಿಜಿಷ್ಟರ್, ಬ್ಯಾಂಕ್ Remittance Book ಹೊರತುಪಡಿಸಿ ಉಳಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ ಬ್ಯಾಂಕ್ Remittance Book ಅನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದನ್ನು ಸ್ವತ: ಉಪ ಆಯುಕ್ತರು(ಆಡಳಿತ) ರವರೇ ಪರಿಶೀಲಿಸಿರುತ್ತಾರೆ.

ಒಟ್ಟಾರೆ, ದಾಸರಹಳ್ಳಿ ವಲಯ ಕಛೇರಿ ಸಂಕೀರ್ಣದ ಕಛೇರಿಗಳಲ್ಲಿ ಸಿಬ್ಬಂಧಿವರ್ಗದವರು ನಿಯಮಾನುಸಾರ ಕಾರ್ಯನಿರ್ವಹಿಸದೇ ಬೇಜಾವಾಬ್ದಾರಿತನ/ ಉದಾಸೀನ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದು ವಲಯ ಜಂಟಿ ಆಯುಕ್ತರು ಹಾಗೂ ಕಛೇರಿ ಮೇಲಧಿಕಾರಿಗಳು ಗಮನ ಹರಿಸದೇ ಕರ್ತವ್ಯಲೋಪ ವೆಸಗಿರುವುದು ಕಂಡುಬಂದಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಮುಂದುವರೆದಂತೆ, ಪಾಲಿಕೆಯ ಸಿಬ್ಬಂದಿವರ್ಗದವರು ಶಿಸ್ತಿನಿಂದ ಕಾರ್ಯನಿರ್ವಹಿಸುವ ಬಗ್ಗೆ ಹಾಗೂ ಮೇಲಧಿಕಾರಿಗಳು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡುವ ಸಲುವಾಗಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

(sd) 18/10/13
ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*

141

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

3. ಎಲ್ಲಾ ಸಮಿತಿಯ ಅಧ್ಯಕ್ಷರುವರುಗಳಿಗೆ
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
6. ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
7. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
8. ಜಂಟಿ ಆಯುಕ್ತರು (ದಾಸರಹಳ್ಳಿ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿಗಳು ರವರಿಗೆ
10. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:21-10-2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು ಶ್ರೀಯುತರಾದ |
|---|---|---|
| 1. ಲಕ್ಷ್ಮೀಕಾಂತ ರೆಡ್ಡಿ | – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 2. ಅಶ್ವಥನಾರಾಯಣಗೌಡ | – ಸದಸ್ಯರು | ಉಪ ಆಯುಕ್ತರು (ಆಡಳಿತ) |
| 3. ಕೆ.ಮಹೇಶ್ ಬಾಬು | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 4. ಎಂ.ಜಿ.ಜಯರತ್ನ | – ಸದಸ್ಯರು | ಉಪ ಕಾನೂನು ಅಧಿಕಾರಿ |
| 5. ಲಲಿತ ಹೆಚ್.ಎಸ್. | – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| 6. ಎಂ.ಶ್ರೀನಿವಾಸ | – ಸದಸ್ಯರು | |
| 7. ಆನಂದ್ ವಿ | – ಸದಸ್ಯರು | |
| 8. ಲಾವಣ್ಯ ಗಣೇಶ್ ರೆಡ್ಡಿ | – ಸದಸ್ಯರು | |
| 9. ವರಲಕ್ಷ್ಮಿ ಜೆ | – ಸದಸ್ಯರು | |
| 10. ಎನ್.ಜಯಪಾಲ | – ಸದಸ್ಯರು | |
| 11. ಎಂ.ಕೆ. ಗುಣಶೇಖರ್ | – ಸದಸ್ಯರು | |

ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು ದಿನಾಂಕ: 21-10-2013 ರಂದು ನಡೆದ ಸಭೆಯಲ್ಲಿ ಚರ್ಚಿಸಲಾದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ವಿಷಯ ಸಂಖ್ಯೆ: 01/2013-14, 02/2013-14, 03/13-14 ರಲ್ಲಿ ಉಲ್ಲೇಖಿಸಲಾಗಿರುವ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸ್ಪಷ್ಟೀಕರಣ/ ವಿವರಣೆಗಳೊಂದಿಗೆ ಕಡತಗಳನ್ನು ಮುಂದಿನ ವಿಷಯ ಸಭೆಯಲ್ಲಿ ತಪ್ಪದೇ ಮಂಡಿಸುವಂತೆ ಉಪ ಆಯುಕ್ತರು (ಆಡಳಿತ) ರವರಿಗೆ ಆದೇಶಿಸಲಾಯಿತು.

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 01/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್ (ದಂಡು ಪ್ರದೇಶ) ರವರ ಬೇಡಿಕೆಗಳ ಕುರಿತು ಮಾನ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 25-06-2011ರಂದು ಪಾಲಿಕೆಯ ಕೇಂದ್ರ ಕಛೇರಿ ಸಭಾಂಗಣ-1ರಲ್ಲಿ ನಡೆದ ಸಭೆಯ ನಡವಳಿಕೆಯಲ್ಲಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ಚರ್ಚಿಸಲಾಗಿದ್ದು, ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ಮಾನ್ಯ ಆಯುಕ್ತರ ಆದೇಶ ಸಂಖ್ಯೆ: ಬಿ12(5ಜಿ)ಪಿಆರ್/441/98-99, ದಿನಾಂಕ: 23-12-1998ರಂತೆ 45 ಪೌರಕಾರ್ಮಿಕರನ್ನು ಖಾಯಂಗೊಳಿಸಿರುವಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ 193 ಸಮಾನ ಕೆಲಸಕ್ಕೆ ಸಮಾನ ವೇತನದಲ್ಲಿ ಕಳೆದ 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಗೂಲಿ ನೌಕರರು ಮರಣ ಹೊಂದಿದ್ದಲ್ಲಿ ಅನುಕಂಪದ ಆಧಾರದಲ್ಲಿ ನೌಕರಿ ನೀಡಲು ಖಾಯಂಗೊಳಿಸುವ ಬಗ್ಗೆ ಕ್ರಮ

24/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆಗೆದುಕೊಳ್ಳಬೇಕೆಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್ (ದಂಡು ಪ್ರದೇಶ) ರವರು ತಿಳಿಸಲಾದ ಮೇರೆಗೆ, ಸದರಿ ಪ್ರಸ್ತಾವನೆಯನ್ನು ಈಗಾಗಲೇ ದಿನಾಂಕ: 09-11-2010ರ ನಡವಳಿಯಂತೆ ಕ್ರಮಕೈಗೊಳ್ಳಲಾಗಿದ್ದು ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು 10 ದಿನದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದ ಅಧಿಸೂಚಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ನಗರ ಪಾಲಿಕೆಗೆ ಹಸ್ತಾಂತರಿಸಿದ ಮೇರೆಗೆ ಸದರಿ ಅಧಿಸೂಚಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳ ಪೈಕಿ 45 ನೌಕರರುಗಳು ದಿನಾಂಕ: 01-01-1986ರ ಮುಂಚೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಸತತ 10 ವರ್ಷಗಳ ಸೇವೆಯನ್ನು ಪೂರೈಸಿದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 31 ಎಂಎನ್‌ಯು 1993, ದಿನಾಂಕ: 21-08-1995ರ ಆದೇಶದಂತೆ ಸದರಿ 45 ಮಂದಿ ನೌಕರರುಗಳನ್ನು ಕ್ರಮಬದ್ಧಗೊಳಿಸಲಾಗಿರುತ್ತದೆ. ಇನ್ನೂಳಿದ ನೌಕರರುಗಳು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಡೆದು ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ವಾರ್ಡ್‌ಗಳಲ್ಲಿ 193 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು 19 ದಿನಗೂಲಿ ನೌಕರರುಗಳು ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದ ಅಧಿಸೂಚಿತ ಪ್ರದೇಶಗಳಿಂದ ಮುಂದುವರೆದು ಸುಮಾರು 10-20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ತದನಂತರ, ಎನ್.ಎಂ.ಆರ್. ನೌಕರರುಗಳನ್ನು ಸರ್ಕಾರದ ಆಧೇಶ ಸಂಖ್ಯೆ: ಹೆಚ್‌ಯುಡಿ 31 ಎಂಎನ್‌ಯು 1993, ದಿನಾಂಕ: 21-08-1995ರ ಆದೇಶದಂತೆ ಸಕ್ರಮಗೊಳಿಸಲು ಈ ಕಛೇರಿ ಪತ್ರ ಸಂಖ್ಯೆ ಬಿ12(5ಜಿ)ಪಿಆರ್/257/00-01 ದಿನಾಂಕ: 22-02-2007ರ ಪತ್ರದಲ್ಲಿ ಸರ್ಕಾರವನ್ನು ಕೋರಲಾಗಿರುತ್ತದೆ. ಆದರೆ, ಸದರಿ ನೌಕರರುಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಿಂದ ಯಾವುದೇ ಅನುಮೋದನೆ ಬಂದಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 31 ಎಂಎನ್‌ಯು 1993, ದಿನಾಂಕ: 21-08-1995ರ ಆದೇಶದಲ್ಲಿ ದಿನಾಂಕ: 01-01-1986ರ ಮುಂಚಿತವಾಗಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿರುವ ನೌಕರರುಗಳನ್ನು ಸದರಿಯವರ 10 ವರ್ಷಗಳ ಸೇವೆಯನ್ನು ನಿರಂತರವಾಗಿ ಪೂರೈಸಿದ್ದ ಪಕ್ಷದಲ್ಲಿ ಅಂತಹ ನೌಕರರುಗಳನ್ನು ಕ್ರಮಬದ್ಧಗೊಳಿಸಲು ಅವಕಾಶವಿರುತ್ತದೆ. ಆದರೆ ಪ್ರಸ್ತುತ 193 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು 19 ದಿನಗೂಲಿ ನೌಕರರುಗಳ ಪೈಕಿ ಕೆಲವು ಮಂದಿ ನೌಕರರುಗಳನ್ನು ಹೊರತು ಪಡಿಸಿ ಉಳಿದೆಲ್ಲಾ ನೌಕರರುಗಳು ದಿನಾಂಕ: 01-01-1986ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಲಾಗಿರುವ 7 ನಗರ ಸಭೆಗಳು 01 ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಜಿಲ್ಲಾಧಿಕಾರಿಗಳು ಸಕ್ರಮಗೊಳಿಸಿದ್ದು, ಸದರಿ ನೌಕರರುಗಳನ್ನು ಸಕ್ರಮಗೊಳಿಸಿರುವುದು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 31 ಎಂಎನ್‌ಯು 1993, ದಿನಾಂಕ: 21-08-1995ರ ಆದೇಶದ ವಿರುದ್ಧವಾಗಿರುವುದರಿಂದ ಈ ಕಛೇರಿ ಪತ್ರ ಸಂಖ್ಯೆ: ಬಿ12(1)ಪಿಆರ್/54/07-08, ದಿನಾಂಕ: 18-12-2007ರ ರೀತ್ಯಾ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾದಂತೆ ಸರ್ಕಾರವು ಜಿಲ್ಲಾಧಿಕಾರಿಗಳ ಸ್ಪಷ್ಟೀಕರಣ ಪಡೆದಿದ್ದು ಜಿಲ್ಲಾಧಿಕಾರಿ ರವರು ಮಾನ್ಯ

24/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಕ್ರಮಗೊಳಿಸಲಾಗಿರುತ್ತದೆಂದು ತಿಳಿಸಿರುವುದರಿಂದ ಸದರಿ ನೌಕರರುಗಳನ್ನು ಸಕ್ರಮಗೊಳಿಸಲು ಕ್ರಮಜರುಗಿಸುವಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ನಅಇ 729 ಎಂಎನ್‌ವೈ 2007, ದಿನಾಂಕ: 13-05-2011ರ ಆದೇಶದಲ್ಲಿ ನಿರ್ದೇಶನ ನೀಡಿರುತ್ತದೆ. ಅದರಂತೆ, 7 ನಗರ ಸಭೆಗಳು 01 ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಸರ್ಕಾರವು ಸಕ್ರಮಗೊಳಿಸಿ ಪಾಲಿಕೆಯಲ್ಲಿ ವಿಲೀನಗೊಳಿಸಿರುತ್ತದೆ. ಸರ್ಕಾರದ ನಿರ್ದೇಶನದಂತೆ ಸದರಿ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲಾಗಿರುತ್ತದೆ.

ಈ ಮಧ್ಯೆ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್ (ದಂಡು ಪ್ರದೇಶ) ರವರು ಪತ್ರ ಬರೆದು 7 ನಗರ ಸಭೆಗಳು 01 ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಜಿಲ್ಲಾಧಿಕಾರಿ ರವರು ಸಕ್ರಮಗೊಳಿಸಿರುವಂತೆ ಸರ್ಕಾರವು ಅನುಮೋದನೆ ನೀಡಿರುವುದರಿಂದ ಪ್ರಸ್ತುತ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 193 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು 19 ದಿನಗೂಲಿ ನೌಕರರುಗಳನ್ನು ಸಹ ಕ್ರಮಬದ್ಧಗೊಳಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ 7 ನಗರ ಸಭೆಗಳು 01 ಪುರಸಭೆಯಲ್ಲಿ ದಿನಾಂಕ: 01-01-1986ರ ಮೊದಲು ಹಾಗೂ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಜಿಲ್ಲಾಧಿಕಾರಿ ರವರು ಸಕ್ರಮಗೊಳಿಸಿರುವಂತೆ ಪಾಲಿಕೆಯಲ್ಲಿ ದಿನಾಂಕ: 01-01-1986ರ ಮೊದಲು ಹಾಗೂ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ 193 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು 19 ದಿನಗೂಲಿ ನೌಕರರುಗಳನ್ನು ಸಹ ಕ್ರಮಬದ್ಧಗೊಳಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ ಮುಂದೆ ದಿನಾಂಕ: 09-04-2012ರಂದು ಟಿಪ್ಪಣಿ ಮಂಡಿಸಲಾಗಿರುತ್ತದೆ.

ಸದರಿ ಟಿಪ್ಪಣಿಗೆ ಸಂಬಂಧಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ ಮುಂದೆ ದಿನಾಂಕ:14-06-2012 ರಂದು ನಡೆದ ಸಭೆಯ ನಡವಳಿಯಲ್ಲಿ ಸರ್ಕಾರದ ದಿನಾಂಕ: 15-11-2006ರ ನಅಇ 95 ಬಿಎಂಎಸ್ 05(ಪಿ-2) ಅಧಿಕೃತ ಜ್ಞಾಪನಾ ಪತ್ರದಲ್ಲಿ ತಿಳಿಸಿರುವ ಷರತ್ತುಗಳಿಗೆ ಬದ್ಧವಾಗಿವೆಯೇ ಎಂಬ ಬಗ್ಗೆ ಸ್ಪಷ್ಟೀಕರಣದೊಂದಿಗೆ ದೃಢೀಕೃತ ವರದಿ ನೀಡತಕ್ಕದ್ದೆಂದು ನಿರ್ಣಯ ಕೈಗೊಂಡು ಕಡತವನ್ನು ಹಿಂದಿರುಗಿಸಿರುತ್ತಾರೆ.

ಪರಿಶೀಲಿಸಲಾಗಿ, ಘನ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 3595-3612/1999ರಲ್ಲಿ ದಿನಾಂಕ: 10-04-2006ರಂದು ನೀಡಿರುವ ತೀರ್ಪು ಹಾಗೂ ಸರ್ಕಾರದ ದಿನಾಂಕ: 15-11-2006ರ ನಅಇ 95 ಬಿಎಂಎಸ್ 05(ಪಿ-2) ಅಧಿಕೃತ ಜ್ಞಾಪನಾ ಪತ್ರದಲ್ಲಿ ಈ ಕೆಳಕಂಡ ಷರತ್ತುಗಳಿರುತ್ತವೆ.

1. ಅಂತಹ ನೌಕರರನ್ನು ಮೂಲತಃ ಮಂಜೂರಾದ ಖಾಲಿ ಹುದ್ದೆಯಲ್ಲಿ ನೇಮಕ ಮಾಡಿರಬೇಕು.
2. ಹೀಗೆ ಅವರನ್ನು ನೇಮಕ ಮಾಡುವಾಗ ಅವರು ಸಂಬಂಧಿತ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

3. ಹೀಗೆ ನೇಮಕಗೊಂಡಂತಹ ನೌಕರರು 10 ವರ್ಷಗಳಿಗೆ ಹೆಚ್ಚಿನ ಅವಧಿಗೆ ಸತತವಾಗಿ ಅದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರಬೇಕು.
4. ನ್ಯಾಯಾಲಯಗಳ ಅಥವಾ ನ್ಯಾಯ ಮಂಡಳಿಗಳ ಆದೇಶಕೊಳಪಟ್ಟು 10 ವರ್ಷಗಳಿಗೂ ಹೆಚ್ಚಿನ ಅವಧಿಗೆ ಅವರನ್ನು ಮುಂದುವರೆಸಿರಬಾರದು.

ಪ್ರಸ್ತುತ ಮಂಡಿಸಿರುವ 189 ಎನ್.ಎಂ.ಆರ್. ದಿನಗೂಲಿ ಪೌರಕಾರ್ಮಿಕರು ಹಾಗೂ ನೌಕರರುಗಳಲ್ಲಿ ಇವರಲ್ಲಿ ಹಾಲಿ 149 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಹಾಗೂ ಎನ್.ಎಂ.ಆರ್. ದಿನಗೂಲಿ ನೌಕರರುಗಳು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇರುವ 149 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಹಾಗೂ ಎನ್.ಎಂ.ಆರ್. ದಿನಗೂಲಿ ನೌಕರರುಗಳಲ್ಲಿ 16 ಮಂದಿ ನೌಕರರು 1986ಕ್ಕಿಂತ ಮುಂಚೆ ನೇಮಕಗೊಂಡಿದ್ದು (ಅನುಬಂಧ-1) ಸದರಿ ನೌಕರರುಗಳಿಗೆ ಮೇಲ್ಕಂಡ 04 ಷರತ್ತುಗಳು ಅನ್ವಯಿಸುವುದಿಲ್ಲವಾಗಿದ್ದು, ಇವರುಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 31 ಎಮ್‌ಎನ್‌ಯು 93, ದಿನಾಂಕ: 21-08-1995ರ ಆದೇಶದಂತೆ ಕ್ರಮಬದ್ಧಗೊಳಿಸಬಹುದಾಗಿರುತ್ತದೆ. ಉಳಿದ 133 ಮಂದಿ ನೌಕರರು 1986ರ ನಂತರ ನೇಮಕಗೊಂಡಿರುವ ನೌಕರರುಗಳಾಗಿರುತ್ತಾರೆ. (ಅನುಬಂಧ-2) ಇವರುಗಳಿಗೆ ಸರ್ಕಾರದ ದಿನಾಂಕ: 15-11-2006ರ ನಅಇ 95 ಬಿಎಂಎಸ್ 05(ಪಿ-2) ಅಧಿಕೃತ ಜ್ಞಾಪನಾ ಪತ್ರದಲ್ಲಿರುವ ಷರತ್ತುಗಳು ಅನ್ವಯಿಸುತ್ತವೆ.

**ಮೇಲ್ಕಂಡ ನಾಲ್ಕು ಷರತ್ತುಗಳಲ್ಲಿ:-**

1ನೇ ಷರತ್ತಿಗೆ ಸಂಬಂಧಿಸಿದಂತೆ ಮೂಲತ: ಮಂಜೂರಾದ ಖಾಲಿ ಹುದ್ದೆಯಲ್ಲಿ ನೇಮಕ ಮಾಡಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ ಆದಾಗ್ಯೂ ಈ ನೌಕರರು ಅಧಿಸೂಚಿತ ಪ್ರದೇಶದಿಂದ ಪಾಲಿಕೆಗೆ ಹಸ್ತಾಂತರಗೊಂಡಿದ್ದು ಇವರುಗಳ ನೇಮಕಾತಿಗೆ ಸಂಬಂಧಿಸಿದ ದಾಖಲಾತಿಗಳು ಲಭ್ಯವಿರುವುದಿಲ್ಲ ಇವರುಗಳೆಲ್ಲರು ಹಿಂದಿನ ಅಧಿಸೂಚಿತ ಪ್ರದೇಶ ಸಮಿತಿ ವತಿಯಿಂದ ಖಾಲಿ ಹುದ್ದೆಗಳ ಎದುರಾಗಿ ನೇಮಕಗೊಂಡಿದ್ದು, ದಿನಾಂಕ: 22-02-2007ರಲ್ಲಿ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ರವರಿಗೆ ಬರೆದಿರುವ ಪತ್ರದಲ್ಲಿ ವಿವರಿಸಿರುವಂತೆ ಪ್ರಸ್ತುತ, ಕಾರ್ಯನಿರ್ವಹಿಸುತ್ತಿರುವ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು ದಿನಗೂಲಿ ನೌಕರರುಗಳನ್ನು ಪಾಲಿಕೆಯ ಮಂಜೂರಾದ ಖಾಲಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಲಾಗಿದೆ ಎಂದು ಸರ್ಕಾರಕ್ಕೆ ಪಾಲಿಕೆಯ ವತಿಯಿಂದ ಪತ್ರ ಬರೆಯಲಾಗಿದೆ ಹಾಗೂ ಸದರಿ ನೌಕರರುಗಳು ಅಧಿಸೂಚಿತ ಪ್ರದೇಶದಲ್ಲಿ ಸಮಿತಿಯ ವತಿಯಿಂದ ಖಾಲಿ ಹುದ್ದೆಗಳಿಗೆ ಎದುರಾಗಿ ನೇಮಕಗೊಂಡು ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ದೃಢೀಕರಿಸಿದ್ದು, ಆದರೆ ಹಿಂದಿನ ದಾಖಲಾತಿಗಳು ಲಭ್ಯವಿರುವುದಿಲ್ಲ. ಸದರಿ ನೌಕರರುಗಳು ಒಂದೇ ಹುದ್ದೆಯಲ್ಲಿ 10 ವರ್ಷಗಳ ಹೆಚ್ಚಿನ ಅವಧಿಗೆ ಕಾರ್ಯನಿರ್ವಹಿಸುತ್ತಿರುವುದು ಪ್ರಸ್ತುತ ಬಟವಾಡೆ ಅಧಿಕಾರಿಗಳ ದೃಢೀಕರಣದಿಂದ ದೃಢಪಟ್ಟಿರುತ್ತದೆ ಹಾಗೂ ಸದರಿ ಅಧಿಸೂಚಿತ ಪ್ರದೇಶಗಳು ಪಾಲಿಕೆಗೆ ವಿಲೀನಗೊಂಡಿರುವುದರಿಂದ ಹಾಗೂ ಇವರುಗಳು ಅಧಿಸೂಚಿತ ಪ್ರದೇಶದಲ್ಲಿ ಕಾನೂನುಬದ್ಧ ರೀತಿಯಲ್ಲಿ ನೇಮಕಾತಿ ಹೊಂದಿರುವ ಬಗ್ಗೆ ಅಗತ್ಯ ದಾಖಲಾತಿಗಳನ್ನು ಪಾಲಿಕೆಗೆ ಹಸ್ತಾಂತರಗೊಂಡ ಸಮಯದಲ್ಲಿ ಪಡೆಯದೇ ಇವರುಗಳ ಸೇವೆಯನ್ನು ಪಾಲಿಕೆಯಲ್ಲಿ ಮುಂದುವರೆಸಿರುವುದರಿಂದ ಇವರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಕ್ರಮವಹಿಸಬೇಕಾಗಿರುತ್ತದೆ. ಈ ಎಲ್ಲಾ ನೌಕರರು

24/10/13

ಸರ್ಕಾರದ ಆದೇಶ ಸಂಖ್ಯೆ: ವನಇ 31 ಎಂಎನ್‌ಇ 93, ದಿನಾಂಕ: 21-08-1995ರಂತೆ ಸಮಾನ ಕೆಲಸಕ್ಕೆ ಸಮಾನ ವೇತನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

2ನೇ ಷರತ್ತಿಗೆ ಸಂಬಂಧಿಸಿದಂತೆ ಪೌರಕಾರ್ಮಿಕರ ನೇಮಕಾತಿಗೆ ಯಾವುದೇ ವಿದ್ಯಾರ್ಹತೆ ಕಡ್ಡಾಯವಿರುವುದಿಲ್ಲ.

3ನೇ ಷರತ್ತಿಗೆ ಸಂಬಂಧಿಸಿದಂತೆ ಸದರಿ ನೌಕರರು 10 ವರ್ಷಗಳಿಗೂ ಹೆಚ್ಚಿನ ಅವಧಿಗೆ ಸತತವಾಗಿ ಅದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವುದು ದೃಢಪಟ್ಟಿರುತ್ತದೆ.

4ನೇ ಷರತ್ತಿಗೆ ಸಂಬಂಧಿಸಿದಂತೆ ಸದರಿ ನೌಕರರುಗಳು ನ್ಯಾಯಾಲಯಗಳ ಅಥವಾ ನ್ಯಾಯ ಮಂಡಳಿಗಳ ಆದೇಶಕೊಳಪಟ್ಟು 10 ವರ್ಷಗಳಿಗೂ ಹೆಚ್ಚಿನ ಅವಧಿಗೆ ಮುಂದುವರೆಸಿರುವುದಿಲ್ಲದಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಮಾಹಿತಿಗಳೊಂದಿಗೆ ಪಾಲಿಕೆಯಲ್ಲಿ ದಿನಾಂಕ: 01-01-1986ರ ಮೊದಲು ನೇಮಕಗೊಂಡಿರುವ 16 ಮಂದಿ (ಅನುಬಂಧ-1) ಹಾಗೂ 1986ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ 133 ಮಂದಿ (ಅನುಬಂಧ-2) ಒಟ್ಟು 149 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು ದಿನಗೂಲಿ ನೌಕರರುಗಳನ್ನು ಸಹ ಕ್ರಮಬದ್ಧಗೊಳಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ ಮುಂದೆ ಕಡತ ಸಂಖ್ಯೆ: :ಬಿ12(5ಜಿ)ಪಿಆರ್/257/00-01/11-12ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:30.09.2013ರ ಟಿಪ್ಪಣಿ.

**ನಿರ್ಣಯ:**

ವಿಷಯದ ಬಗ್ಗೆ ಧೀರ್ಘವಾದ ಚರ್ಚೆಯ ನಂತರ ಉಪ ಆಯುಕ್ತರು (ಆಡಳಿತ) ರವರು ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಆಯುಕ್ತರ ದಿನಾಂಕ: 30-09-2013 ರ ಟಿಪ್ಪಣಿಯನ್ನು ಒಪ್ಪುತ್ತಾ ಈ ಕೆಳಕಂಡ ಷರತ್ತಿಗೊಳಪಡಿಸಿದೆ.

**ಷರತ್ತು:**

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಕೆಲವು ಪೌರಕಾರ್ಮಿಕರುಗಳ ಜನ್ಮ ದಿನಾಂಕ ಮತ್ತು ಕೆಲಸಕ್ಕೆ ಸೇರಿದ ದಿನಾಂಕಗಳನ್ನು ಸ್ಪಷ್ಟವಾಗಿ ನಮೂದಿಸದೇ ಇರುವುದು ಕಂಡುಬಂದಿದ್ದು ಇದಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲಾತಿಗಳನ್ನು ಪಡೆದು ಸದರಿಯವರುಗಳ ಜನ್ಮ ದಿನಾಂಕ/ಕೆಲಸಕ್ಕೆ ಸೇರಿದ ದಿನಾಂಕಗಳನ್ನು ನಿರ್ದಿಷ್ಟವಾಗಿ ನಮೂದಿಸುವುದು.

**ವಿಷಯ ಸಂಖ್ಯೆ: ಸಿಆಸುಸ್ಥಾಸ/06/2013-14**

**ನಿರ್ಣಯ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿವರ್ಗದವರಲ್ಲಿ ಶಿಸ್ತು, ಸಮಯಪಾಲನೆ ಹಾಗೂ ಕರ್ತವ್ಯದಲ್ಲಿ ನಿಷ್ಠೆಯಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ಪೈಕಿ ಮೊದಲನೇಯದಾಗಿ ಪ್ರತಿಯೊಬ್ಬ ಸಿಬ್ಬಂದಿಯು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಛೇರಿಯ ಅವಧಿಯಲ್ಲಿ ಪಾಲಿಕೆಯು ವಿತರಿಸಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸುವ ಪದ್ಧತಿ ಇರುತ್ತದೆ. ಇದೇ ರೀತಿ ಪಾಲಿಕೆಯ ಸಿಬ್ಬಂದಿವರ್ಗದವರ ಪೈಕಿ 'ಡಿ' ದರ್ಜೆ ನೌಕರರು ಸಮವಸ್ತ್ರ ಧರಿಸುವುದು ವಾಡಿಕೆ ಆಗಿರುತ್ತದೆ. ಇದೇ ನಿಟ್ಟಿನಲ್ಲಿ ಪಾಲಿಕೆಯ ಇತರೆ ದರ್ಜೆ ಸಿಬ್ಬಂದಿಗಳಿಗೂ ಸಮವಸ್ತ್ರವನ್ನು ಧರಿಸುವ ಬಗ್ಗೆ ಕ್ರಮ ಜರುಗಿಸಿದ ಪಕ್ಷದಲ್ಲಿ ಪಾಲಿಕೆಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರನ್ನು ಗುರುತಿಸುವುದು ಸುಲಭವಾಗುವ ಸಾಧ್ಯತೆ ಇರುವುದೇ ಅಲ್ಲದೇ ಕಛೇರಿ ಸಮಯದಲ್ಲಿ ಸಿಬ್ಬಂದಿಗಳು ಕರ್ತವ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ತಪ್ಪಿಸಿ ಪಾಲಿಕೆಯ ಸಿಬ್ಬಂದಿಗಳಲ್ಲಿ ಹೆಚ್ಚಿನ ಶಿಸ್ತು/ಸನ್ನಡತೆಯಿಂದ ಕಾರ್ಯನಿರ್ವಹಿಸುವಂತಾಗುವುದರಿಂದ ಈ ಬಗ್ಗೆ ಪಾಲಿಕೆಯ ಸಭೆಯಲ್ಲಿ ಸೂಕ್ತ ನಿರ್ಣಯ ಕೈಗೊಳ್ಳುವಂತೆ ಕೋರಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/07/2013-14**

**ನಿರ್ಣಯ:**

ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಎಸ್.ಸಿ.ಆರ್ 2008 ದಿನಾಂಕ: 07-03-2012 ರೀತ್ಯಾ ಕೆಲವು ಹುದ್ದೆಗಳನ್ನು ಹೊರತು ಪಡಿಸಿ 'ಸಿ' ದರ್ಜೆ ನೌಕರರುಗಳ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಹಾಗೂ ಹಾಲಿ ಸೇವೆಯಲ್ಲಿರುವ ಸಿಬ್ಬಂದಿಗಳು ಗಣಕ ಯಂತ್ರ ತರಬೇತಿಯನ್ನು ಅತ್ಯಾವಶ್ಯಕವಾಗಿ ಪಡೆಯುವ ಸಲುವಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗುವ ಸಂಬಂಧ ಆದೇಶವನ್ನು ಹೊರಡಿಸಿದ್ದು ಸದರಿ ಆದೇಶವನ್ನು ಪಾಲಿಕೆಯಲ್ಲಿ ತಹಲ್‌ವರೆವಿಗೂ ಅಳವಡಿಸಿಕೊಳ್ಳದೇ ಇದ್ದು ಈ ಬಗ್ಗೆ ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಈ ಕೂಡಲೇ ಪಾಲಿಕೆಯಲ್ಲಿಯು ಸಹ ಅಳವಡಿಸಿಕೊಳ್ಳತಕ್ಕದೆಂದು ಆಯುಕ್ತರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಿದೆ.

24/10/13

ಲಕ್ಷ್ಮೀಕಾಂತ ರೆಡ್ಡಿ

ಅಧ್ಯಕ್ಷರು,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ.*
3. *ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ*
4. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
5. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ*
6. *ಅಪರ ಆಯುಕ್ತರು/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ*
7. *ಉಪ ಕಾನೂನು ಅಧಿಕಾರಿ ರವರಿಗೆ ಸೂಕ್ತ ಕ್ರಮಕ್ಕಾಗಿ*
8. *ಕೌನ್ಸಿಲ್ ಕಾರ್ಯದರ್ಶಿಗಳು*
9. *ಕಛೇರಿ ಪ್ರತಿ.*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22-10-2013 ರಂದು ಕೈಗೊಂಡ ಜಂಟಿ ಆಯುಕ್ತರು ಬೊಮ್ಮನಹಳ್ಳಿ ಕಛೇರಿ ಹಾಗೂ ಸಂಕೀರ್ಣದಲ್ಲಿರುವ ಇತರೆ ಕಛೇರಿಗಳ ತಪಾಸಣಾ ವರದಿ**

**ಹಾಜರಿದ್ದ ಸದ್ಯಸರು**
**ಶ್ರೀಯುತರುಗಳಾದ**

1. ಲಕ್ಷ್ಮಿಕಾಂತರೆಡ್ಡಿ – ಅಧ್ಯಕ್ಷರು
2. ಅಶ್ವಥನಾಯರಾಣಗೌಡ – ಸದಸ್ಯರು
3. ಹೆಚ್.ಎಸ್.ಲಲಿತ – ಸದಸ್ಯರು
4. ಎಂ.ಜಿ ಜಯರತ್ನ – ಸದಸ್ಯರು
5. ವಿ.ಆನಂದ್ – ಸದಸ್ಯರು
6. ಎಂ.ಶ್ರೀನಿವಾಸ – ಸದಸ್ಯರು
7. ಜೆ. ವರಲಕ್ಷ್ಮಿ – ಸದಸ್ಯರು
8. ಎಸ್. ಜಯಪಾಲ – ಸದಸ್ಯರು
9. ಎಂ.ಕೆ. ಗುಣಶೇಖರ್ – ಸದಸ್ಯರು

ಈ ದಿವಸ ಬೆಳಿಗ್ಗೆ 11.30 ರ ಸಮಯಕ್ಕೆ ಜಂಟಿ ಆಯುಕ್ತರು ಬೊಮ್ಮನಹಳ್ಳಿ ಕಛೇರಿಯ ಕಟ್ಟಡ ಸಂಕೀರ್ಣಕ್ಕೆ ಸಮಿತಿಯು ತಪಾಸಣೆ ಕೈಗೊಂಡಿದ್ದು ಈ ಸಂದರ್ಭದಲ್ಲಿ ಬೊಮ್ಮನಹಳ್ಳಿ ವಲಯ ನಿಯಂತ್ರಣ ಕೊಠಡಿಯನ್ನು ಪರಿಶೀಲಿಸಿದಾಗ ಅಧಿಕಾರಿಗಳು ರಾತ್ರಿ ವೇಳೆ ತಪಾಸಣೆ ಮಾಡಿದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳ ವಿವರಗಳನ್ನು ನಮೂದಿಸಿರುವ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ನಿಯಂತ್ರಣ ಕೊಠಡಿಯಲ್ಲಿ ಇರಬೇಕಾದ ತುರ್ತು ನಿರ್ವಹಣಾ (ಸ್ಕ್ವಾಡ್) ಸಿಬ್ಬಂದಿ ಲಭ್ಯವಿರುವುದಿಲ್ಲ.

ಬೊಮ್ಮನಹಳ್ಳಿ ವಲಯ ಸಂಕೀರ್ಣದಲ್ಲಿ ಹಾಜರಾತಿಯನ್ನು ಬಯೋಮೆಟ್ರಿಕ್ ವ್ಯವಸ್ಥೆಯಡಿಯಲ್ಲಿ ನಿರ್ವಹಿಸಿರುವುದಿಲ್ಲ. ಹಾಜರಾತಿ ಪುಸ್ತಕವನ್ನೂ ಸಹ ಸಮರ್ಪಕವಾಗಿ ನಿರ್ವಹಣೆ ಮಾಡಿರುವುದಿಲ್ಲ. ಒಟ್ಟು ಸಿಬ್ಬಂದಿಗಳ ಪೈಕಿ ಶೇಕಡ 60 ರಷ್ಟು ಸಿಬ್ಬಂದಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಇದ್ದು ಶ್ರೀ ರವೀಂದ್ರ, ತೋಟಗಾರಿಕೆ ಅಧೀಕ್ಷಕರುವರು ದಿನಾಂಕ:08-10-2013 ರಿಂದ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಗಂಭೀರ ಕರ್ತವ್ಯಲೋಪವೆಸಗಿದ್ದು ಇದನ್ನು ಗೈರು ಹಾಜರಿ ಎಂದು ಪರಿಗಣಿಸಿ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು ಬೊಮ್ಮನಹಳ್ಳಿ ರವರು ಹಾಜರಾತಿ ಪುಸ್ತಕವನ್ನು ಪರಿಶೀಲಿಸದೇ ಇರುವುದು ಕಂಡುಬಂದಿರುತ್ತದೆ. ಹಿರಿಯ ಅಧಿಕಾರಿಗಳಿಂದ ಕಿರಿಯ ವರ್ಗದ ನೌಕರರ ತನಕ ಯರೊಬ್ಬರೂ ಗುರುತಿನ ಚೀಟಿ ಧರಿಸದೇ ಇರುವುದು ಕಂಡುಬಂದಿರುತ್ತದೆ. ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸಿಲ್ಲದೇ ಇರುವುದು ಕಂಡುಬಂದಿರುತ್ತದೆ. ತಪಾಸಣೆ ಸಂದರ್ಭದಲ್ಲಿ ಜಂಟಿ ಆಯುಕ್ತರು ಹಾಜರಿರುವುದಿಲ್ಲ. ಉಪ ಆಯುಕ್ತರು ಹಾಜರಿದ್ದು ಬೊಮ್ಮನಹಳ್ಳಿ ವಲಯಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಕೇಳಿದರೂ ಸಮರ್ಪಕವಾದ ಮಾಹಿತಿಯನ್ನು ಒದಗಿಸಿರುವುದಿಲ್ಲ. ಕಂಪ್ಯೂಟರ್ ಆಪರೇಟರ್‌ಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಜಂಟಿ ಆಯುಕ್ತರವರ ಕಛೇರಿಯಲ್ಲಿ ನಗದು ಘೋಷಣೆ ಪುಸ್ತಕದಲ್ಲಿ ಚಲನವಲನ ಪುಸ್ತಕ ನಗದು ಪುಸ್ತಕಗಳನ್ನು ನಿರ್ವಹಣೆ ಮಾಡಿಲ್ಲದೇ ಇರುವುದನ್ನು ಗಮನಿಸಲಾಗಿರುತ್ತದೆ.

ನಂತರ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಭೇಟಿ ನೀಡಿ ಕ್ಯಾಷ್ ಪುಸ್ತಕ, ಬಿ.ಆರ್ ರಿಜಿಷ್ಟರ್, ಎಂ.ಬಿ.ಪುಸ್ತಕ ಲೆಕ್ಕ ಪುಸ್ತಕ, ಲೆಕ್ಕ ಪರಿಶೋಧನಾ ವರದಿಗಳು, Remittance Book, Tender open register, EMD register ಗಳನ್ನು ಹಾಜರು ಪಡಿಸುವಂತೆ ತಿಳಿಸಲಾಗಿ ಕ್ಯಾಷ್ ರಿಜಿಷ್ಟರ್, ಬ್ಯಾಂಕ್ Remittance Book EMD Register ಹೊರತುಪಡಿಸಿ ಉಳಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ ಬ್ಯಾಂಕ್ Remittance Book ಅನ್ನು ಸಮಪರ್ಕವಾಗಿ ನಿರ್ವಹಿಸದೇ ಇರುವುದುದ ಗಮನಿಸಲಾಗಿದೆ.

ಸಹಾಯಕ ಕಂದಾಯ ಅಧಿಕಾರಿ ಬೊಮ್ಮನಹಳ್ಳಿ ಕಛೇರಿಗೆ ಭೇಟಿ ನೀಡಿದ್ದು ಈ ಸಂದರ್ಭದಲ್ಲಿ ಹಾಜರಿದ್ದ ಸಹ ಕಂದಾಯ ಅಧಿಕಾರಿಗಳು ಸಮಿತಿಯು ಕೇಳಿದ ಯಾವುದೇ ಮಾಹಿತಿಗೆ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ ಅಲ್ಲದೇ ಕೇಳಲಾದ ದಾಖಲೆಗಳನ್ನು ಸಹ ಪರಿಶೀಲನೆಗೆ ಸಲ್ಲಿಸಿರುವುದಿಲ್ಲ. ಸಹಾಯಕ ನಿಯಂತ್ರಕರು (ಹಣಕಾಸು) ಕಛೇರಿಗೆ ಭೇಟಿ ನೀಡಿ ನಗದು ಪುಸ್ತಕ, ಚೆಕ್ ರಿಜಿಸ್ಟರ್, ಚೆಕ್‌ಗಳ ವಿತರಣೆ ಪುಸ್ತಕವನ್ನು ಪರಿಶೀಲಿಸಲಾಗಿ ಸಮಪರ್ಕವಾಗಿ ನಿರ್ವಹಿಸದಿರುವುದು ಕಂಡುಬಂದಿರುತ್ತದೆ. ನೌಕರರ ವೇತನದಲ್ಲಿ ಕಟಾವು ಮಾಡಿರುವ ಹಣವನ್ನು ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆಡಿಟ್ ಆಕ್ಷೇಪಣೆಗೆ ಸಂಬಂಧಿಸಿದ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ.

ನಂತರ ನಗರ ಯೋಜನೆ ವಿಭಾಗಕ್ಕೆ ಭೇಟಿ ನೀಡಿ ಎಲ್‌ಪಿ ರಿಜಿಸ್ಟರ್, ನಗದು ಪುಸ್ತಕ, ಬ್ಯಾಂಕ್ Remittance Book ಹಾಗೂ ಬಾಕಿ ಇರುವ/ಮಂಜೂರಾಗಿರುವ ನಕ್ಷೆ ಕಡತಗಳನ್ನು ಪರಿಶೀಲಿಸಲಾಗಿ ಇವುಗಳಲ್ಲಿ ಹಲವಾರು ನ್ಯೂನತೆಗಳು ಇರುವುದು ಕಂಡುಬಂದಿರುತ್ತದೆ. ಹಾಜರಿದ್ದಂತಹ ಸಹಾಯಕ ನಿರ್ದೇಶಕರು ನಗರ ಯೋಜನೆ ರವರು ಹಾಗೂ ನಗರ ಯೋಜಕರು (AE) ಸಮಿತಿಯು ಕೇಳಿದ ಮಾಹಿತಿಯನ್ನು ನೀಡುವಲ್ಲಿ ಪೂರ್ಣಪ್ರಮಾಣದಲ್ಲಿ ವಿಫಲರಾಗಿದ್ದಲ್ಲದೇ ಸಮಿತಿಯ ಕೋರಿದ ಯಾವುದೇ ದಾಖಲೆಗಳನ್ನು ನೀಡುವಲ್ಲಿ

Reddy 24/10/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಫಲರಾಗಿರುತ್ತಾರೆ ಹಾಗೂ ಹಣಕಾಸಿನ ವ್ಯವಹರಣೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನೀಡಲು ವಿಫಲರಾಗಿರುತ್ತಾರೆ.

ಒಟ್ಟಾರೆ, ಬೊಮ್ಮನಹಳ್ಳಿ ವಲಯ ಕಛೇರಿ ಸಂಕೀರ್ಣದ ಕಛೇರಿಗಳಲ್ಲಿ ಸಿಬ್ಬಂದಿವರ್ಗದವರು ನಿಯಮಾನುಸಾರ ಕಾರ್ಯನಿರ್ವಹಿಸದೇ ಬೇಜಾವಾಬ್ದಾರಿತನ/ ಅಸಡ್ಡೆ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದು ಮೇಲಧಿಕಾರಿಗಳು ಸಹ ಈ ಬಗ್ಗೆ ಗಮನ ಹರಿಸದೇ ಕರ್ತವ್ಯಲೋಪ ವೆಸಗುತ್ತಿರುವುದು ಕಂಡುಬಂದಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ. ಮುಂದುವರೆದಂತೆ ಪಾಲಿಕೆಯ ಸಿಬ್ಬಂದಿವರ್ಗದವರು ಶಿಸ್ತಿನಿಂದ ಕಾರ್ಯನಿರ್ವಹಿಸುವ ಬಗ್ಗೆ ಹಾಗೂ ಮೇಲಧಿಕಾರಿಗಳು ಸಮಪರ್ಕವಾಗಿ ಮೇಲ್ವಿಚಾರಣೆ ಮಾಡುವ ಸಲುವಾಗಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

Reddy 24/10/13
ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಎಲ್ಲಾ ಸಮಿತಿಯ ಅಧ್ಯಕ್ಷರುವರುಗಳಿಗೆ*
4. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
5. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
6. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
7. *ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
8. *ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
9. *ಕೌನ್ಸಿಲ್ ಕಾರ್ಯದರ್ಶಿಗಳು ರವರಿಗೆ*
10. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 31-10-2013 ರಂದು ಕೈಗೊಂಡ ಅಪರ ಆಯುಕ್ತರು ಯಲಹಂಕ ಕಛೇರಿ ಹಾಗೂ ಅಧೀನ ಕಛೇರಿಗಳ ತಪಾಸಣಾ ವರದಿ**

**ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ**

1. ಲಕ್ಷ್ಮಿಕಾಂತರೆಡ್ಡಿ – ಅಧ್ಯಕ್ಷರು
2. ಹೆಚ್.ಎಸ್.ಲಲಿತ – ಸದಸ್ಯರು
3. ಎಂ.ಜಿ ಜಯರತ್ನ – ಸದಸ್ಯರು
4. ಎಂ.ಶ್ರೀನಿವಾಸ – ಸದಸ್ಯರು
5. ಎಸ್. ಜಯಪಾಲ – ಸದಸ್ಯರು

**ಹಾಜರಿದ್ದ ಅಧಿಕಾರಿಗಳು**

ಅಪರ ಆಯುಕ್ತರು (ಯಲಹಂಕ)
ಉಪ ಆಯುಕ್ತರು (ಯಲಹಂಕ)

ಈ ದಿವಸ ಬೆಳಿಗ್ಗೆ 11.30 ರ ಸಮಯಕ್ಕೆ ಅಪರ ಆಯುಕ್ತರು ಯಲಹಂಕ ಕಛೇರಿಯ ಕಟ್ಟಡ ಸಂಕೀರ್ಣಕ್ಕೆ ಸಮಿತಿಯು ತಪಾಸಣೆ ಕೈಗೊಂಡಿದ್ದು ಈ ಸಂದರ್ಭದಲ್ಲಿ ಯಲಹಂಕ ವಲಯ ನಿಯಂತ್ರಣ ಕೊಠಡಿಯನ್ನು ಪರಿಶೀಲಿಸಿದಾಗ ಅಧಿಕಾರಿಗಳು ರಾತ್ರಿ ವೇಳೆ ತಪಾಸಣೆ ಮಾಡಿದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳ ವಿವರಗಳನ್ನು ನಮೂದಿಸಿರುವ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಮುಟ್ಟುಗೋಲು ಹಾಕಿಕೊಂಡಿರುವ ಸಾಮಗ್ರಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ನಿಯಂತ್ರಣ ಕೊಠಡಿಯಲ್ಲಿ ಇರಬೇಕಾದ ತುರ್ತು ನಿರ್ವಹಣಾ (ಸ್ಕ್ವಾಡ್) ಸಿಬ್ಬಂದಿ ಲಭ್ಯವಿರುವುದಿಲ್ಲ ದೂರು ಪುಸ್ತಕದಲ್ಲಿ ನಮೂದಾಗಿರುವ ದೂರನ್ನು ಪರಿಹರಿಸಿರುವ ಬಗ್ಗೆ ವಿವರಗಳನ್ನು ದಾಖಲಿಸಿರುವುದಿಲ್ಲ. ದೂರು ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ ನಿರ್ವಹಿಸಲಾಗಿರುತ್ತದೆ. ದೂರು ಪುಸ್ತಕವನ್ನು ಪರಿಶೀಲಿಸಲಾಗಿ ಸಾಕಷ್ಟು ದೂರುಗಳು ಬೀದಿ ದೀಪಗಳಿಗೆ ಸಂಬಂಧಪಟ್ಟಿದಾಗಿದ್ದು ಗುತ್ತಿಗೆದಾರರು ಬೀದಿ ದೀಪ ನಿರ್ವಹಣೆ ಕಾರ್ಯವನ್ನು ಸಮಪರ್ಕವಾಗಿ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ನಿಯಂತ್ರಣ ಕೊಠಡಿ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿ/ಸಿಬ್ಬಂದಿವರ್ಗದವರು ಸಂಜೆ 6.00 ಗಂಟೆ ಕರ್ತವ್ಯಕ್ಕೆ ಹಾಜರಾಗಿರುವುದಾಗಿ ಸಹಿ ಹಾಕಿದ್ದು ಮಾರನೇ ದಿನ ಬೆಳಿಗ್ಗೆ 6.00 ಗಂಟೆಗೆ ಕರ್ತವ್ಯ ನಿರ್ವಹಿಸಿ ನಿರ್ಗಮಿಸಿರುವ ಸಮಯದಲ್ಲಿ ಸಹಿ ಮಾಡಿರುವುದಿಲ್ಲ. ಇದನ್ನು ಗಮನಿಸಿದರೆ ಸದರಿ ವಲಯದಲ್ಲಿ ನಿಯಂತ್ರಣ ಕೊಠಡಿ ಕರ್ತವ್ಯವನ್ನು ನಿರ್ವಹಿಸದೇ ಸಂಜೆ 6.00 ಗಂಟೆ ಸಹಿ ಮಾಡಿ ಮನೆಗೆ ಹಿಂದಿರುಗಿರುತ್ತಾರೆಂದು ಪರಿಗಣಿಸಬಹುದಾಗಿದೆ ಇನ್ನು ಕೆಲವರು ಕರ್ತವ್ಯಕ್ಕೆ ಹಾಜರಾಗದೇ ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ.

ಯಲಹಂಕ ವಲಯ ಕಛೇರಿ ಸಂಕೀರ್ಣದಲ್ಲಿ ಹಾಜರಾತಿಯನ್ನು ಬಯೋಮೆಟ್ರಿಕ್ ವ್ಯವಸ್ಥೆಯಡಿಯಲ್ಲಿ ನಿರ್ವಹಿಸಿರುವುದಿಲ್ಲ. ಹಾಜರಾತಿ ಪುಸ್ತಕವನ್ನೂ ಸಹ ಸಮರ್ಪಕವಾಗಿ ನಿರ್ವಹಣೆ ಮಾಡಿರುವುದಿಲ್ಲ. ಒಟ್ಟು ಸಿಬ್ಬಂದಿಗಳ ಪೈಕಿ ಶೇಕಡ 20 ರಷ್ಟು ಸಿಬ್ಬಂದಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಇದ್ದು ಹಿರಿಯ ಅಧಿಕಾರಿಗಳಿಂದ ಕಿರಿಯ ವರ್ಗದ ನೌಕರರ ತನಕ ಯಾರೊಬ್ಬರೂ ಗುರುತಿನ ಚೀಟಿ ಧರಿಸದೇ ಇರುವುದು



16/11/13

ಕಂಡುಬಂದಿರುತ್ತದೆ. ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸಿಲ್ಲದೇ ಇರುವುದು ಕಂಡುಬಂದಿರುತ್ತದೆ. ಕಂಪ್ಯೂಟರ್ ಆಪರೇಟರ್‌ಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಅಪರ ಆಯುಕ್ತರವರ ಕಛೇರಿಯಲ್ಲಿ ನಗದು ಘೋಷಣೆ ಪುಸ್ತಕ, ಚಲನವಲನ ಪುಸ್ತಕ ನಗದು ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲದೇ ಇರುವುದನ್ನು ಗಮನಿಸಲಾಗಿರುತ್ತದೆ. ಅಪರ ಆಯುಕ್ತರವರ ಕಛೇರಿಯ ವ್ಯವಸ್ಥಾಪಕರವರೇ ಗುರುತಿನ ಚೀಟಿ ಧರಿಸಿರುವುದಿಲ್ಲ.

ಸಹಾಯಕ ನಿಯಂತ್ರಕರು (ಹಣಕಾಸು) ಕಛೇರಿಯ ಹಾಜರಾತಿ ಪರಿಶೀಲಿಸಲಾಗಿ ಸಹಾಯಕ ನಿಯಂತ್ರಕರು(ಹಣಕಾಸು) ರವರು ಹಲವಾರು ದಿನಗಳಿಂದ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಇದ್ದು ಈ ಬಗ್ಗೆ ಕಛೇರಿಯ ಲೆಕ್ಕಧೀಕ್ಷಕರನ್ನು ವಿಚಾರಿಸಲಾಗಿ ಸದರಿಯವರು ತರಬೇತಿ ಹೋಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ಸಮಿತಿಗೆ ಒದಗಿಸಿರುವುದಿಲ್ಲ, ಹಾಜರಾತಿ ಪುಸ್ತಕದಲ್ಲಿಯೂ ಯಾವುದೇ ವಿವರಗಳನ್ನು ನಮೂದಿಸಿರುವುದಿಲ್ಲ.

ನಂತರ ನಗರ ಯೋಜನೆ ವಿಭಾಗಕ್ಕೆ ಭೇಟಿ ನೀಡಿ ಎಲ್‌ಪಿ ರಿಜಿಸ್ಟರ್, ನಗದು ಪುಸ್ತಕ, ಬ್ಯಾಂಕ್ Remittance Book ಹಾಗೂ ಬಾಕಿ ಇರುವ/ಮಂಜೂರಾಗಿರುವ ನಕ್ಷೆ ಕಡತಗಳನ್ನು ಪರಿಶೀಲಿಸಲಾಗಿ ಇವುಗಳಲ್ಲಿ ಹಲವಾರು ನ್ಯೂನತೆಗಳು ಇರುವುದು ಕಂಡುಬಂದಿರುತ್ತದೆ. ಹಾಜರಿದ್ದಂತಹ ಸಹಾಯಕ ನಿರ್ದೇಶಕರು ನಗರ ಯೋಜನೆ ರವರು ಹಾಗೂ ನಗರ ಯೋಜಕರು (AE) ಸಮಿತಿಯು ಕೇಳಿದ ಮಾಹಿತಿಯನ್ನು ನೀಡುವಲ್ಲಿ ವಿಫಲರಾಗಿದ್ದಲ್ಲದೇ ಹಣಕಾಸಿನ ವ್ಯವಹರಣೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನೀಡಲು ವಿಫಲರಾಗಿರುತ್ತಾರೆ. ಮುಖ್ಯವಾಗಿ ಕಟ್ಟಡ ನಕ್ಷೆ ಮಂಜೂರಾತಿ ಪರವಾನಗಿ ಪುಸ್ತಕದಲ್ಲಿ ಯಾವುದೇ ಮಾಹಿತಿಗಳನ್ನು ನಮೂದಿಸದೇ ಇದ್ದರೂ ಖಾಲಿ ಪರವಾನಗಿಗೆ ಸಹಾಯಕ ಅಭಿಯಂತರರು ಸಹಿ ಮಾಡಿರುವುದು ಕಂಡುಬಂದಿರುತ್ತದೆ.

ನಂತರ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಕಛೇರಿಗೆ ಭೇಟಿ ನೀಡಿ ಕ್ಯಾಷ್ ಪುಸ್ತಕ, ಬಿ.ಆರ್ ರಿಜಿಸ್ಟರ್, ಎಂ.ಬಿ.ಪುಸ್ತಕ ಲೆಕ್ಕ ಪುಸ್ತಕ, ಲೆಕ್ಕ ಪರಿಶೋಧನಾ ವರದಿಗಳು, ಪಾವತಿ ಪುಸ್ತಕ ಟೆಂಡರ್ ತೆರೆಯುವ ಪುಸ್ತಕ, ಇ.ಎಂ.ಡಿ ಪುಸ್ತಕಗಳನ್ನು ಪರಿಶೀಲಿಸಲಾಗಿ ಸಮರ್ಪಕವಾಗಿ ನಿರ್ವಹಿಸದೇ ಇರುವುದನ್ನು ಗಮನಿಸಲಾಗಿರುತ್ತದೆ. ಕಛೇರಿಯ ಚಲನವಲನ ಪುಸ್ತಕವನ್ನು ಪರಿಶೀಲಿಸಲಾಗಿ ಅಧಿಕಾರಿ/ಸಿಬ್ಬಂದಿವರ್ಗದವರು ಕಛೇರಿಯಿಂದ ತೆರಳಿರುವ ಸಮಯವನ್ನು ಮಾತ್ರ ನಮೂದಿಸಿದ್ದು ಯಾವ ಕೆಲಸಕ್ಕಾಗಿ ಯಾವ ಕಛೇರಿಗೆ ತೆರಳಿದ್ದರೂ ಎಂಬುದರ ಬಗ್ಗೆ ಹಾಗೂ ಹಿಂದಿರುಗಿದ ಸಮಯದ ಬಗ್ಗೆ ವಿವರಗಳನ್ನು ನಮೂದಿಸದೇ ಕರ್ತವ್ಯಲೋಪವೆಸಗಿರುತ್ತಾರೆ. ಈ ಕಛೇರಿಯಲ್ಲಿಯೂ ಸಹ ಹಿರಿಯ ಅಧಿಕಾರಿಗಳಿಂದ ಕಿರಿಯ ವರ್ಗದ ನೌಕರರ ತನಕ ಯಾರೊಬ್ಬರೂ ಗುರುತಿನ ಚೀಟಿ ಧರಿಸದೇ ಇರುವುದು ಕಂಡುಬಂದಿರುತ್ತದೆ.

ನಂತರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೊಡಿಗೆಹಳ್ಳಿ ಉಪವಿಭಾಗ ಕಛೇರಿಗೆ ಭೇಟಿ ನೀಡಿ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಶ್ರೀ. ಕೃಷ್ಣ, ಆರೋಗ್ಯ ಪರಿವೀಕ್ಷಕರು, ದಿನಾಂಕ: 28-10-2013 ರಿಂದ ಸಹಿ ಮಾಡದೇ ಇರುವುದು ಕಂಡುಬಂದಿರುತ್ತದೆ. ಅನಧಿಕೃತ ಕಟ್ಟಡಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ಕೇಳಲಾಗಿ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ.



16/11/13

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜ.ಓ ಮತ್ತು ಸಿ.ಓ ರಿಜಿಸ್ಟರ್ ಅನ್ನು ಪರಿಶೀಲನೆಗೆ ಒದಗಿಸಿರುವುದಿಲ್ಲ. ಕಛೇರಿಯಲ್ಲಿದ್ದ ಸಿಬ್ಬಂದಿವರ್ಗದವರನ್ನು ಅಭಿಯಂತರರ ಬಗ್ಗೆ ವಿಚಾರಿಸಲಾಗಿ ತಪಾಸಣೆಗೆ ಹೋಗಿರುವುದಾಗಿ ತಿಳಿಸಿದ್ದು ಈ ವಿಷಯವನ್ನು ನಮೂದಿಸಿರುವ ಚಲನವಲನ ಪುಸ್ತಕವನ್ನು ಹಾಜರು ಪಡಿಸಿರುವುದಿಲ್ಲ. ಕೊಡಿಗೆಹಳ್ಳಿ ಉಪವಿಭಾಗಕ್ಕೆ ಸಂಬಂಧಿಸಿದಂತೆ ಕಟ್ಟಡ ನಕ್ಷೆ ಮಂಜೂರು ಮಾಡಿರುವ/ಬಾಕಿ ಇರುವ ಕಡತಗಳ ವಿವರಗಳನ್ನು ಒದಗಿಸಿರುವುದಿಲ್ಲ. ಆಡಿಟ್ ಆಕ್ಷೇಪಣೆಗಳಿಗೆ ಉತ್ತರಗಳನ್ನು ಒದಗಿಸಿರುವುದಿಲ್ಲ. ಪಾಸ್‌ಷೀಟ್/ ಆಡಿಟ್ ಪುಸ್ತಕ ನಿರ್ವಹಣೆ ಮಾಡಿಲ್ಲದೇ ಇರುವುದು ಕಂಡುಬಂದಿರುತ್ತದೆ.

ಸಹಾಯಕ ಕಂದಾಯ ಅಧಿಕಾರಿ ಕೊಡಿಗೆಹಳ್ಳಿ ಕಛೇರಿಗೆ ಭೇಟಿ ನೀಡಿದ್ದು ಈ ಸಂದರ್ಭದಲ್ಲಿ ಹಾಜರಿದ್ದ ಸಿಬ್ಬಂದಿವರ್ಗದವರು ಸಮಿತಿಯು ಕೇಳಿದ ಯಾವುದೇ ಮಾಹಿತಿಗೆ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ ಅಲ್ಲದೇ ಕೇಳಲಾದ ದಾಖಲೆಗಳನ್ನು ಸಹ ಪರಿಶೀಲನೆಗೆ ಸಲ್ಲಿಸಿರುವುದಿಲ್ಲ. ಕಛೇರಿಯಲ್ಲಿದ್ದ ಬಿ-ಖಾತಾ ನೊಂದಣಿ ಪುಸ್ತಕವನ್ನು ಪರಿಶೀಲಿಸಲಾಗಿ ಬಿ-ಖಾತಾ ನೀಡಿರುವ ಕಟ್ಟಡಗಳಿಂದ ತೆರಿಗೆ ವಸೂಲು ಮಾಡಿರುವ ವಿವರಗಳನ್ನು ನಮೂದಿಸದೇ ಇರುವುದು ಕಂಡುಬಂದಿರುತ್ತದೆ. ತೆರಿಗೆ/ಕಂದಾಯ ಪರಿವೀಕ್ಷಕರು ಪ್ರತಿನಿತ್ಯ ಕಟ್ಟಡ ತಪಾಸಣೆ ನಡೆಸಿರುವ ಪುಸ್ತಕವನ್ನು/ವಿವರಗಳನ್ನು ಹಾಜರುಪಡಿಸಿರುವುದಿಲ್ಲ.

ತಪಾಸಣೆ ಮಾಡಲಾದ ಎಲ್ಲಾ ಕಛೇರಿಗಳ ಪರಿಸರವು ಪೂರ್ಣ ಪ್ರಮಾಣದಲ್ಲಿ ಅಶುಚಿತ್ವದಿಂದ ಕೂಡಿದ್ದು, ಯಾವೊಬ್ಬ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೇ ಇರುವುದು ಅವರುಗಳ ಬೇಜವಾಬ್ದಾರಿತನವನ್ನು ಎತ್ತಿತೋರಿಸುತ್ತದೆ. ಕಚೇರಿಗಳ ಆವರಣದಲ್ಲಿನ ಅಶುಚಿತ್ವದ ಬಗ್ಗೆ ಅಧಿಕಾರಿಗಳು ಸೂಕ್ತ ಗಮನ ಹರಿಸಿ ಶುಚಿತ್ವದ ಬಗ್ಗೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳತಕ್ಕದೆಂದು ಸಮಿತಿಯು ಸೂಚಿಸಿರುತ್ತದೆ.

ಒಟ್ಟಾರೆ, ಯಲಹಂಕ ವಲಯ ಕಛೇರಿಗಳಲ್ಲಿ ಸಿಬ್ಬಂದಿವರ್ಗದವರು ನಿಯಮಾನುಸಾರ ಕಾರ್ಯನಿರ್ವಹಿಸದೇ ಬೇಜವಾಬ್ದಾರಿತನ/ ಅಸಡ್ಡೆ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದು ತಪಾಸಣೆ ಸಂದರ್ಭದಲ್ಲಿ ಖುದ್ದು ಹಾಜರಿದ್ದ ಅಪರ ಆಯುಕ್ತರು ಯಲಹಂಕ ರವರಿಗೆ ಸೂಕ್ತ ಮೇಲ್ವಿಚಾರಣೆ ನಡೆಸಿ ನ್ಯೂನತೆಗಳನ್ನು ಸರಿಪಡಿಸುವಂತೆ ತಿಳಿಸಲಾಗಿರುತ್ತದೆ ಹಾಗೂ ಕರ್ತವ್ಯಲೋಪವೆಸಗಿರುವ ಅಧಿಕಾರಿ/ಸಿಬ್ಬಂದಿವರ್ಗದವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

16/11/13

ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಎಲ್ಲಾ ಸಮಿತಿಯ ಅಧ್ಯಕ್ಷರುವರುಗಳಿಗೆ*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*

5. ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
6. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,
7. ಅಪರ ಆಯುಕ್ತರು (ಯಲಹಂಕ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
8. ಕೌನ್ಸಿಲ್ ಕಾರ್ಯದರ್ಶಿಗಳು ರವರಿಗೆ
9. ಕಛೇರಿ ಪ್ರತಿ
10. ಸಮಿತಿಯ ಈ ಕೆಳಕಂಡ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.

1) ಶ್ರೀ ಕೆ. ಮಹೇಶ್‌ಬಾಬು ವಾರ್ಡ್–146
2) ಶ್ರೀಮತಿ ಲಲಿತ ಹೆಚ್. ಎಸ್. ವಾರ್ಡ್–162
3) ಶ್ರೀಮತಿ ಎಂ.ಜಿ ಜಯರತ್ನ– ವಾರ್ಡ್ –108
4) ಶ್ರೀ ಆನಂದ್ ವಿ. ವಾರ್ಡ್–20
5) ಎಂ. ಶ್ರೀನಿವಾಸ ವಾರ್ಡ್–192
6) ಲಾವಣ್ಯ ಗಣೇಶ್ ರೆಡ್ಡಿ ವಾರ್ಡ್–49
7) ಶ್ರೀಮತಿ ವರಲಕ್ಷ್ಮಿ ಜೆ ವಾರ್ಡ್–86
8) ಎನ್. ಜಯಪಾಲ ವಾರ್ಡ್–45
9) ಎಂ.ಕೆ. ಗುಣಶೇಖರ್ ವಾರ್ಡ್–63